ಹಿತ್ತಲ ಗಿಡ

ಚಾತುರ್ಮಾಸಿಕ
ಸೈರು 9, ಕೊಯಿಲು 1, ಜನವರಿ - ಏಪ್ರಿಲ್, 2003

ರೈತ, ವಿಜ್ಞಾನಿ, ವಿದ್ಯಾರ್ಥಿ,
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

'ಸೃಷ್ಟಿ' ಸನ್ಮಾನ ವಿಜೇತ ಕನ್ನಡಿಗರು



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಸಂಪಾದಕೀಯ

ಹನಿ ನೀರಿನ ಸದ್ಬಳಕೆಯ ಹರಿಕಾರರು

ಶತಮಾನದಲ್ಲೇ ಕಂಡರಿಯದ ಬಟ್ಟಬರವನ್ನು ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯಗಳು ಎದುರಿಸುತ್ತಿವೆ. ನಾವು ಈ ಬರದಿಂದ ಕಲಿಯಬೇಕಾಗಿರುವ ಮುಖ್ಯ ಪಾಠವೆಂದರೆ ಲಭ್ಯವಿರುವ ಪ್ರತಿ ಹನಿ ನೀರನ್ನೂ ಗರಿಷ್ಠ ಮಟ್ಟದಲ್ಲಿ ಸದುಪಯೋಗ ಪಡಿಸಿಕೊಳ್ಳುವ ವಿಚಾರಕ್ಕೆ ಸಂಬಂಧಿಸಿರುವುದಾಗಿರುತ್ತದೆ. ಇಸ್ರೇಲ್ ದೇಶದಲ್ಲಿ ನೀರು ಬಳಸುವ ವಿಚಾರವನ್ನು ಅಥವಾ ವೈಜ್ಞಾನಿಕ ರೀತಿಯಲ್ಲಿ ನೀರು ನಿರ್ವಹಣೆ ವಿಚಾರವನ್ನು ಉದಾಹರಿಸುವುದು ಸುಲಭ. ಆದರೆ ಜನ ಅದನ್ನು ಹೇಗೆ ಅನುಸರಿಸುವಂತೆ ಮಾಡುವುದೆನ್ನುವುದೇ ಮುಖ್ಯ ಪ್ರಶ್ನೆ. ಇದು ಜನಸಮೂಹದೊಳಗಿಂದ ಅದರಲ್ಲೂ ಮುಖ್ಯವಾಗಿ ರೈತ ಸಮುದಾಯದೊಳಗಿಂದ ಅಂತರ್ಗತವಾಗಿ ಮೂಡಿ ಬಂದಾಗ ಮಾತ್ರ ಸಾಧ್ಯವಾಗುತ್ತದೆ. ಇಂತಹ ಹಲವಾರು ಮಹತ್ವದ ಪ್ರಯತ್ನಗಳಿಂದು ವೈಯಕ್ತಿಕ ಮತ್ತು ಸಮೂಹಮಟ್ಟದಲ್ಲಿ ನಮ್ಮ ರಾಜ್ಯದಾದ್ಯಂತ ನಡೆಯುತ್ತಿದ್ದು ಅವುಗಳಲ್ಲಿ ಕೆಲವನ್ನು ಈ ಸಂಚಿಕೆಯಲ್ಲಿ ಪ್ರಸ್ತಾಪಿಸಲಾಗಿದೆ.

ಓರ್ವ ರೈತನಾಗಿ ನಮ್ಮ ಪ್ರಗತಿಪರ ಸಾವಯುವ ಕೃಷಿಕ ಬಸವರಾಜು ಸಂತೇಶಿವರರು ಇದನ್ನು "ಮಳೆ ಕೊಯಿಲು" ಎಂದು ಸೊಗಸಾಗಿ ಕರೆದಿರುವರು. ಹಾಗೇ ಪ್ರತಿ ಹೆಕ್ಟೇರ್ ಭೂಮಿಯಲ್ಲಿ ಕನಿಷ್ಟ ಒಂದು ಗುಂಟೆಯಾದರೂ "ಕೆರೆ ಹೊಂಡ" ಇರಲೇಬೇಕೆಂಬ ತತ್ವವನ್ನು ಬಯಲು ನಾಡಿನ ರೈತರಲ್ಲಿ ಗಟ್ಟಿ ಮಾಡುತ್ತಾ ಆ ಮೂಲಕ ಅಂತರ್ಜಲದ ಮರುಪೂರಣ ಮಾಡ ಹೊರಟಿರುವ "ಬತ್ತಿದ ಬಾವಿಗಳ ಭಗೀರಥ" ರೋಣಾದ ನಮ್ಮ ಅಯ್ಯಪ್ಪ ಮಸಗಿಯವರ ಸಾಧನೆ ಕೂಡ ಅತ್ಯಂತ ಶ್ಲಾಘನಾರ್ಹ. ಜನರನ್ನು ಹುರಿದುಂಬಿಸಿ ಅಯ್ಯಪ್ಪ ಮಸಗಿಯವರು ಅತ್ಯಂತ ಕನಿಷ್ಠ ವೆಚ್ಚದಲ್ಲಿ ಈಗಾಗಲೇ 13 ಕೆರೆಗಳನ್ನು ನಿರ್ಮಿಸಿರುತ್ತಾರೆ. ಇದೇ ರೀತಿ ಹಾವೇರಿ ಜಿಲ್ಲೆಯ ರಾಜಶೇಖರ ಗುರುಸಿದ್ದಪ್ಪ ಸಿಂಧೂರರು ಒಂದೂವರೆ ಎಕರೆ ವಿಸ್ತೀರ್ಣದಲ್ಲಿ ಈ ಭಾರಿಯ ಭೀಕರ ಬರದಲ್ಲೂ ಬತ್ತದ ಒಂದು ಕೃತಕ ಕೆರೆಯನ್ನೇ ನಿರ್ಮಿಸಿರುವರು ! ಸ್ವತ: ಐದು ಲಕ್ಷ ರೂಪಾಯಿ ಖರ್ಚಿನಿಂದ ನಿರ್ಮಿಸಿರುವ ಈ ಕೆರೆಯಲ್ಲಿ ಸುಮಾರು ಐದು ಕೋಟಿ ಲೀಟರ್ ನೀರು ನಿಲ್ಲುವಂತೆ ಮಾಡಿ ಸುತ್ತ ಮುತ್ತಲಿನ ಎರಡು ಕಿಲೋಮೀಟರ್ ದೂರದಲ್ಲಿ ಅಂತರ್ಜಲ ಅಭಿವೃದ್ಧಿಗೊಳ್ಳುವಂತೆ ಮಾಡಿರುವರು. ಇವೆಲ್ಲಕ್ಕಿಂತ ಪ್ರಮುಖವಾಗಿ, ಬರಿದೇ ಹನಿ ನೀರಷ್ಟೇ ಅಲ್ಲ ಇಂಚು ಜಾಗವನ್ನೂ ಮಹಿಳೆಯರು, ಅದರಲ್ಲೂ ಪಟ್ಟಣ ಪ್ರದೇಶದ ಮಹಿಳೆಯರು ಹೇಗೆ ಸದುಪಯೋಗ ಪಡಿಸಿಕೊಳ್ಳಬಹುದು ಎಂಬುದನ್ನು ಶ್ರೀಮತಿ ಅನುಸೂಯ ಶರ್ಮರು ತೋರಿಸಿಕೊಟ್ಟಿರುವರು. ಬೆಂಗಳೂರಿನ ತಮ್ಮ ಮನೆಯ ತಾರಸಿಯಲ್ಲೆ ಪುಟ್ಟ ಸಾವಯವ ತೋಟ ಒಂದನ್ನು ಸೃಷ್ಟಿಸಿದ್ದು, ಸುತ್ತ ಮುತ್ತಲಿನ ಮಹಿಳೆಯರೂ ಇದನ್ನು ಅನುಸರಿಸುವಂತೆ ದಶಕದಿಂದ ಪ್ರಯತ್ನಿಸುತ್ತಿರುವರು. ಅಯ್ಯಪ್ಪ ಮಸಗಿ ಮತ್ತು ಅನುಸೂಯ ಶರ್ಮರಿಗೆ ಈ ಭಾರಿ ಸೃಷ್ಟಿಸನ್ಮಾನ ಪ್ರಶಸ್ತಿ ಲಭಿಸಿರುವುದು ಅತ್ಯಂತ ಸಮಯೋಚಿತವಾಗಿದೆ.

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology Values & Institutions), Bangalore
SRISTI (Society for Research and Initiatives for Sustainable Technologies and Institutions), Ahmedabad
NIF (National Innovation Foundation, India), New Delhi

ಸಂಪಾದಕೀಯ

ಸಾವಯವ ಕೃಷಿ ಪರ್ಯಾಯ ಸಂವಹನದ ಹರಿಕಾರರು

ಸಾವಯವ ಬೇಸಾಯ ಕೃಷಿ ವಿಶ್ವ ವಿದ್ಯಾನಿಲಯ ಮತ್ತು ವ್ಯವಸ್ಥಿತ ವಿಜ್ಞಾನ ಕೇಂದ್ರಗಳಿಂದ ಗಟ್ಟಿಯಾಗಲು ಹಲವು ಇತಿ ಮಿತಿಗಳಿವೆ. ಈ ಆಧುನಿಕ ಕೃಷಿ ವಿಜ್ಞಾನ ಸಂಸ್ಥೆಗಳು ರಾಸಾಯನಿಕ ಕೃಷಿ ಬಗೆಗಿನ ತಮ್ಮ ನಿಲುವನ್ನು ಸ್ಪಷ್ಟಗೊಳಿಸುವವರೆಗೂ ರೈತ ಸಮುದಾಯ ಇವರನ್ನು ಗುಮಾನಿಯಿಂದಲೇ ನೋಡುತ್ತಿರುತ್ತದೆ. ಆದರೆ, ಸಾವಯವ ಕೃಷಿಯ ಬಗೆಗಿನ ಅನುಭವದ ವಿನಿಮಯ ಮತ್ತು ಚರ್ಚೆ ರೈತ-ರೈತರ ನಡುವೆಯೇ ರಾಜ್ಯದ ಹಲವು ಜಿಲ್ಲೆಗಳಲ್ಲಿ ಇಂದು ನಡೆಯುತ್ತಿದ್ದು, ಈ ರೀತಿಯ ಪರ್ಯಾಯ ಸಂವಹನ ಅಥವಾ ವಿಸ್ತರಣೆ ಮೂಲಕ ಸಾವಯವ ಕೃಷಿ ಇಂದು ಗಟ್ಟಿಯಾಗುವಂತಾಗಿದೆ. ಉದಾಹರಣೆಗೆ ಇಂದು ಹಾಸನ ಜಿಲ್ಲೆಯ ಮೂಲೆ ಮೂಲೆಯಲ್ಲಿ ತಿಂಗಳಿಗೊಮ್ಮೆ ರೈತರು ಸಾವಯವ ಕೃಷಿಕರೊಬ್ಬರ ಹೊಲದಲ್ಲೇ ಸಭೆ ಸೇರಿ ಈ ರೀತಿಯ ವಿಚಾರ ವಿನಿಮಯ ನಡೆಸುತ್ತಿರುವರು. ಹಾಗೇ, ಬೆಂಗಳೂರಿನ ಸುತ್ತ ಮುತ್ತ 'ಸಹಜ ಸಂಮೃದ್ಧ' ಎಂಬ ಹೆಸರಿನ ಸಾವಯವ ಕೃಷಿಕರ ಒಕ್ಕೂಟ ಇದೇ ರೀತಿ ರೈತರ ಹೊಲದಲ್ಲಿ ಕಳೆದೆರಡು ವರ್ಷಗಳಿಂದ ಸಭೆ ಸೇರುತ್ತಾ ಸಂವಾದ ನಡೆಸುತ್ತಿದೆ. ಈ ಅನನ್ಯ ಪ್ರಯೋಗಗಳ ಹಿಂದೆ ಹಲವಾರು ವ್ಯಕ್ತಿಗಳು ಶಕ್ತಿಮೀರಿ ನಿಸ್ವಾರ್ಥ ಭಾವನೆಯಿಂದ ದುಡಿಯುತ್ತಿರುವರು. ಹಾಸನ ಆಕಾಶವಾಣಿಯ ಶ್ರೀ ವಿಜಯ ಅಂಗಡಿ ಮತ್ತು ಬೆಂಗಳೂರು ಗ್ರೀನ್ ಫೌಂಡೇಷನ್‌ನ ಶ್ರೀ ಕೃಷ್ಣಪ್ರಸಾದ್ ಅಂತಹಾ ಇಬ್ಬರು ಉತ್ಸಾಹಿ ತರುಣರಾಗಿದ್ದು, ಇವರಿಬ್ಬರ ಕಾರ್ಯಕ್ಕೆ ಈ ಭಾರಿಯ 'ಸೃಷ್ಟಿ' ಸನ್ಮಾನ ಪುರಸ್ಕಾರ ದೊರೆತಿರುವುದು ಅತ್ಯಂತ ಸೂಕ್ತವಾಗಿರುತ್ತದೆ.

ಹನಿಬೀ ಜಾಲಕ್ಕೆ ಹೊಸ ಚೇತನ

ಹನಿ ಬೀ ಜಾಲ (Honeybee Network), ಹನಿಬೀ ಆಂಗ್ಲ ಪತ್ರಿಕೆ ಕೇಂದ್ರೀಯವಾಗಿದ್ದು ಅದೇ ದೃಷ್ಟಿಕೋನದ ಇತರ ಏಳು ಸ್ಥಳೀಯ ಭಾಷಾ ಪತ್ರಿಕೆಗಳ ಹಿಂದೆ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ಒಳಗೊಂಡಿರುವ ಒಂದು ವಿಕೇಂದ್ರೀಕೃತ, ಆದರೆ ವಿಧ್ಯುಕ್ತವಲ್ಲದ ಜಾಲ. ಈ ಜಾಲ ಹುಟ್ಟಿ ಈಗಾಗಲೇ ದಶಕವೇ ಕಳೆದಿದ್ದು ಇದರ ಹಿಂದೆ ಪ್ರೊಫೆಸರ್ ಅನಿಲ್ ಗುಪ್ತಾರವರು ಗಟ್ಟಿಯಾಗಿ ನಿಂತಿರುವರು. ಈ ಪತ್ರಿಕಾ ಜಾಲ ಜನರಿಗೆ 'ಹೇಳು'ವುದಕ್ಕಿಂತ ಮುಖ್ಯವಾಗಿ ಅವರನ್ನು 'ಕೇಳು'ತ್ತಾ ಅವರ ಅನುಭವ, ಜ್ಞಾನ, ತಂತ್ರಜ್ಞಾನ ಮಿಗಿಲಾಗಿ ಸಮಸ್ಯೆಗಳ ಪರಿಹಾರಕ್ಕೆ ಅವರವರೇ ಕಂಡುಕೊಂಡಿರುವ ಪರಿಹಾರಗಳನ್ನು ವ್ಯವಸ್ಥಿತ ರೀತಿಯಲ್ಲಿ ದಾಖಲಿಸಿ ಪಸರಿಸುವುದೇ ಈ ಪತ್ರಿಕೆಗಳ ಮೂಲೋದ್ದೇಶ. ಕೃಷಿ, ಪಶುಪಾಲನೆ, ಒಟ್ಟಾರೆ ಗ್ರಾಮೀಣ ಬದುಕಿನ ದಿನನಿತ್ಯದ ಸಮಸ್ಯೆಗಳ ಪರಿಹಾರಕ್ಕೆ ವ್ಯಕ್ತಿಗಳು ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ವ್ಯವಸ್ಥೆಯ ಮೇಲೆ ಪೂರ್ತಿ ಅವಲಂಬಿತವಾಗುವುದನ್ನು ತಪ್ಪಿಸಿ, ಇತರ ಪ್ರದೇಶ ಮತ್ತು ಭಾಷೆಯ ಜನರ ಅನುಭವದತ್ತ ನೋಡುವಂತೆ ಮಾಡಿರುವುದೇ ಹನಿಬೀ ಜಾಲದ ವೈಶಿಷ್ಟ್ಯತೆ. ಈ ರೀತಿ ತಮ್ಮ ಅನುಭವ ಜ್ಞಾನವನ್ನು ದಾರೆ ಎರೆದ ವ್ಯಕ್ತಿ ಮತ್ತು ಸಮೂಹಗಳು ಅನಾಮಿಕರಾಗದಂತೆ ಎಲ್ಲ ಪತ್ರಿಕೆಗಳು ಕಟ್ಟೆಚ್ಚರವಹಿಸುತ್ತಿವೆ. ಒಂದು ದುಂಬಿಯ ತರಹ ಹೂವಿನಿಂದ ಹೂವಿಗೆ ಹಾರಿ, ಮಕರಂದ ಹೀರಿ, ಅವುಗಳಲ್ಲಿ ಪರಾಗಸ್ಪರ್ಶಕ್ಕೆ ಅನುವು ಮಾಡಿಕೊಡುತ್ತಾ, ಜೇನನ್ನು ಸಂಗ್ರಹಿಸಿ, ಕಿಂಚಿತ್ತೂ ಸ್ವಾರ್ಥವಿಲ್ಲದೆ ಇತರರಿಗೆ ಅರ್ಪಿಸುವಂತಹ ತತ್ವಕ್ಕೆ ಹನಿಬೀ ಜಾಲ ಸಂಪೂರ್ಣ ಬದ್ಧವಾಗಿದೆ. ಹಾಗಾಗಿ, ವಿಶ್ವದಲ್ಲೇ ಇದೊಂದು ಅನನ್ಯ ಪ್ರಯೋಗ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುತ್ತದೆ. ಈ ಜಾಲದ ಕಾರ್ಯಗಳನ್ನು ಸ್ವಲ್ಪ ವ್ಯವಸ್ಥಿತಗೊಳಿಸಲು 1993ರಲ್ಲಿ 'ಸೃಷ್ಟಿ' (SRISTI) ಎಂಬ ಒಂದು ಸ್ವಯಂ ಸೇವಾ ಸಂಸ್ಥೆಯನ್ನು ಪ್ರಾರಂಭಿಸಲಾಯ್ತು. ಆದರೆ ಈಗ್ಗೆ ಮೂರು ವರ್ಷಗಳ ಹಿಂದೆ ಸ್ಥಾಪನೆಯಾದ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನ (National Innovation Foundation)ದ ಪ್ರಾರಂಭ ಹನಿಬೀ ಜಾಲದ ಧ್ಯೇಯೋದ್ದೇಶಗಳಿಗೆ ರಾಷ್ಟ್ರೀಯ ಮಟ್ಟದ ಒಂದು ವಿಸ್ತೃತ ಸ್ವರೂಪ ನೀಡುವ ಪ್ರಯತ್ನವಾಗಿರುತ್ತದೆ. ಪ್ರೊ. ಗುಪ್ತಾರವರೇ ಈ ಎಲ್ಲವುಗಳ ಜವಾಬ್ದಾರಿಯನ್ನು ಇದುವರೆಗೂ ಹೊತ್ತಿರುತ್ತಾರೆ. ಈಗ ಅವರ ಮೇಲೆ ಒತ್ತಡ ಜಾಸ್ತಿಯಾಗಿರುವುದರಿಂದ ಹನೀಬೀ ಜಾಲದ ಮುಂದಾಳತ್ವವನ್ನು ನಮ್ಮ ತಮಿಳು ಸಹೋದರ ಪತ್ರಿಕೆ 'ನೂಮ್ ವಾಲಿ ವೇಲನ್‌ಮೈ' ಸಂಪಾದಕ, ಅಪ್ಪಟ ಗಾಂಧಿವಾದಿ ಮಿತ್ರ ವಿವೇಕಾನಂದನ್‌ರವರಿಗೆ ವಹಿಸಲಾಗಿದೆ. ಇವರ ನಾಯಕತ್ವದಲ್ಲಿ ಹನಿಬೀ ಜಾಲ ತನ್ನ ಸ್ವಾಯತ್ತತೆಯನ್ನುಳಿಸಿಕೊಂಡು ಮತ್ತಷ್ಟು ಗಟ್ಟಿಯಾಗಿ ಬೆಳೆಯಲೆಂದು 'ಹಿತ್ತಲಗಿಡ' ಹಾರೈಸುತ್ತದೆ.

ಕಾವೇರಿ ಬಳಗದ ಮಹತ್ವದ ಸಭೆಗಳು

ಕಾವೇರಿ ನದೀ ನೀರಿನ ಹಂಚಿಕೆಯ ವಿಚಾರ ಕೇವಲ ರಾಜಕೀಯದಿಂದಾಗಿ ಕರ್ನಾಟಕ ಮತ್ತು ತಮಿಳುನಾಡಿನ ಜನರ ನಡುವೆ ಅನಗತ್ಯ ವಿವಾದ ಮತ್ತು ಕಲಹಕ್ಕೆ ಎಡೆಮಾಡಿಕೊಟ್ಟಿದೆ. ಇದನ್ನು ಬಗೆಹರಿಸಲು ಕಳೆದ ಏಪ್ರಿಲ್ 4 ಮತ್ತು 5ರಂದು ಕಾವೇರಿ ಕೊಳ್ಳದ ಎರಡೂ ರಾಜ್ಯದ ರೈತರನ್ನು ಒಟ್ಟುಸೇರಿಸಿ ಮುಕ್ತವಾಗಿ ಚರ್ಚಿಸುವ ಯಶಸ್ವಿ ಪ್ರಯತ್ನವೊಂದು ಚೆನ್ನೈನಲ್ಲಿ ಏರ್ಪಟ್ಟಿತ್ತು. ಇದರ ರೂವಾರಿ 'ಮದ್ರಾಸ್ ಅಭಿವೃದ್ಧಿ ಅಧ್ಯಯನ ಸಂಸ್ಥೆ'ಯ ತಜ್ಞ ಪ್ರೊ. ಜನಕರಾಜನ್‌ರಾಗಿದ್ದರೆ 'ಹಿತ್ತಲಗಿಡ' ಸಂಪಾದಕರು ಕರ್ನಾಟಕದಿಂದ ರೈತರನ್ನು ಒಟ್ಟುಸೇರಿಸಿ ನಿರ್ವಹಿಸುವ ಹೊಣೆ ಹೊತ್ತಿರುತ್ತಾರೆ. ಈ ಸಭೆಯಲ್ಲಿ ರೈತರ ನಡುವೆ ಒಂದು ಆರೋಗ್ಯಕರ ಅರ್ಥಪೂರ್ಣ ಸಂವಾದ ಏರ್ಪಾಡಾಗುವುದಕ್ಕೆ ಪೂರಕವಾಗಿ ಎರಡೂ ರಾಜ್ಯಗಳಿಂದ ಪ್ರತ್ಯೇಕ ತಜ್ಞರುಗಳ ತಂಡಗಳು ಭಾಗವಹಿಸಿದ್ದವು. ರೈತ ಧುರೀಣ ಶ್ರೀ ಪುಟ್ಟಣ್ಣಯ್ಯ, ನೀರಾವರಿ ತಜ್ಞ ಶ್ರೀ ಭವಾನಿ ಶಂಕರ್, ಅರ್ಥಶಾಸ್ತ್ರಜ್ಞ ಡಾ. ಬಿಸಲಯ್ಯ ಮುಂತಾದವರು ಕರ್ನಾಟಕ ತಂಡದಲ್ಲಿದ್ದರೆ ತಮಿಳು ನಾಡು ತಂಡದಲ್ಲಿ ರಂಗನಾಥನ್ ಮತ್ತಿತರ ಪ್ರಮುಖ ರೈತ ಮುಖಂಡರು ಭಾಗವಹಿಸಿದ್ದರು. ಮುಕ್ತ ಮನಸ್ಸಿನಿಂದ ನಡೆದ ಸಂವಾದದಲ್ಲಿ ಎರಡೂ ಕಡೆಯ ರೈತರಲ್ಲಿದ್ದ ಹಲವು ತಪ್ಪು ಕಲ್ಪನೆಗಳು ದೂರವಾಗಿ ಪರಸ್ಪರ ನಂಬಿಕೆ ಮತ್ತು ಅರಿವಿನ ವಾತಾವರಣ ಏರ್ಪಾಡಾಗಿರುವುದು ಈ ಸಭೆಯ ದೊಡ್ಡ ಯಶಸ್ಸಾಗಿರುತ್ತದೆ.

ಇದರ ಮುಂದಿನ ಹಂತವಾಗಿ, ಎರಡನೇ ಸಭೆಯನ್ನು ಇದೇ ಜೂನ್ 4 ಮತ್ತು 5ರಂದು ಬೆಂಗಳೂರಿನಲ್ಲಿ ಏರ್ಪಡಿಸಲಾಗಿರುತ್ತದೆ. ಇದರಲ್ಲಿ ಮೊದಲನೆ ಸಭೆಯಲ್ಲಿ ಭಾಗವಹಿಸಿದ ಎಲ್ಲಾ ರೈತರು ಮತ್ತು ತಜ್ಞರು ಭಾಗವಹಿಸಲಿದ್ದು, ಸಂವಾದವನ್ನು ಮುಂದುವರೆಸಲು ಯೋಚಿಸಲಾಗಿರುತ್ತದೆ. ಇದರಲ್ಲಿ ಖ್ಯಾತ ಪತ್ರಕರ್ತ ಶ್ರೀ ಎನ್. ರಾಮ್, ಹಿರಿಯ ನ್ಯಾಯವಾದಿ ಡಿ.ಎಂ. ಚಂದ್ರಶೇಖರ್ ಮತ್ತು ಕರ್ನಾಟಕದ ಹಿರಿಯ ಅಧಿಕಾರಿ ಶ್ರೀ ಸತೀಶ್ ಚಂದ್ರರವರು ಭಾಗವಹಿಸಲಿರುವರು. ಕಾವೇರಿ ನದಿ ನೀರಿನ ಹಂಚಿಕೆಯ ವಿಚಾರವನ್ನು 'ಕಲಹದಿಂದ ಸಹಕಾರ' ದತ್ತ ಕೊಂಡೊಯ್ಯುವ ಗುರಿ ಹೊಂದಿರುವ ಈ ಸಭೆ ಇಡೀ ದೇಶದಲ್ಲಿ ನದೀನೀರಿನ ಹಂಚಿಕೆಯ ವಿಚಾರದಲ್ಲಿ ಕೈಗೊಂಡ ಅತ್ಯಂತ ಮಹತ್ವದ ಪ್ರಯೋಗವಾಗಿರುತ್ತದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ತೆಂಗಿನ ಕೀಟಗಳ ಹತೋಟಿ

ಅ) ರೈನಾಸರಸ್ ದುಂಬಿ: ತೆಂಗಿನ ಬೆಳೆಗಳಲ್ಲಿ ಸುಳಿ ಕಡಿಯುವ ಈ ಕೀಟದ ಬಾಧೆ ವಿಪರೀತ. ಈ ಕೀಟಗಳನ್ನು ಗೂಬೆಯಿಂದ ನಿಯಂತ್ರಿಸಲು ಸಾಧ್ಯ. ಆದ್ದರಿಂದ ಗೂಬೆ ಸಾಕಾಣಿಕೆ ರೈತರಲ್ಲಿ ಬರಬೇಕು ಎನ್ನುತ್ತಾರೆ, ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕಿನ ಬಸವರಾಜು ಸಂತೇಶಿವರ. ಇವರ ಸಾಕಣಿಕೆಯನ್ನು ರೈತರು ಅನುಸರಿಸಬೇಕು. ಇವರ ತೋಟದಲ್ಲಿ ನಾಲ್ಕು ಗೂಬೆಗಳಿದ್ದು ಈ ಕೀಟದ ಹಾವಳಿ ಕಂಡು ಬರುತ್ತಿಲ್ಲ. ಆದರೆ ಗೂಬೆ ಸಾಕಾಣಿಕೆಗೆ ಆಸಕ್ತಿ ಇಲ್ಲದ ರೈತರಿಗೆ ಮತ್ತೊಂದು ಉಪಾಯವನ್ನು ಇವರು ಕೊಡುತ್ತಾರೆ. ಐದು ಕೆ.ಜಿ. ಅರಳು ಬೀಜಗಳನ್ನು ಹುರಿದು, ರುಬ್ಬಿ ಚೆನ್ನಾಗಿ (ಘಮ ಘಮ ವಾಸನೆ ಬರುವವರೆಗೆ) ಬೇಯಿಸಿದರೆ ಅರಳೆಣ್ಣೆ ತೇಲುತ್ತಿರುತ್ತದೆ ಹಾಗೂ ಕೆಳಗೆ ಅರಳಿನ ಮಡ್ಡಿ (ಹಿಂಡಿ) ಶೇಖರವಾಗಿರುತ್ತದೆ. ಈ ಮಡ್ಡಿಯನ್ನು ಮಣ್ಣಿನ ಮಡಿಕೆಗಳಲ್ಲಿ ಇಟ್ಟು ಅವುಗಳ ಮೇಲೆ ರಂಧ್ರ ಮಾಡಿದ ಮಡಿಕೆಗಳಿಂದ ಮುಚ್ಚಬೇಕು. ಮಡ್ಡಿಯ ವಾಸನೆಗೆ ದುಂಬಿ ಬಂದು ಬಿದ್ದು ಸಾಯುತ್ತವೆ.

ಆ) ಕೆಂಪು ಮೂತಿ ಕೀಟ: ಕೆಂಪು ಮೂತಿ *(Red palm weevil)* ಕೀಟಗಳ ಬಾಧೆ ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಿಂದ ಪ್ರಾರಂಭವಾಗುತ್ತದೆ. ಈ ಕೀಟದ ನಿಯಂತ್ರಣಕ್ಕೆ ಅರ್ಧ ಲೀಟರ್ ನೀರಿನಲ್ಲಿ 200 ಗ್ರಾಂ ಬೆಲ್ಲ ಕರಗಿಸಿ ಇದರೊಂದಿಗೆ 100 ಗ್ರಾಂ ಹೊಗೆಸೊಪ್ಪಿನ ಪುಡಿಯನ್ನು ಮಿಶ್ರ ಮಾಡಿ ಈ ಮಿಶ್ರಣವನ್ನು ಮಡಿಕೆಯಲ್ಲಿ ಹಾಕಿ ತೆಂಗಿನ ತೋಟಗಳಲ್ಲಿ ಇಡಬೇಕು. ಕೆಂಪು ಮೂತಿ ಕೀಟಗಳು ಅದರಲ್ಲಿ ಬಂದು ಬೀಳುತ್ತವೆ. ಅಲ್ಲಿಯೇ ಸಾವನ್ನಪ್ಪುತ್ತವೆ. ಈ ರೀತಿ ನಿಯಂತ್ರಿಸಿ ಗಿಡಗಳನ್ನು ಉಳಿಸಿಕೊಳ್ಳಬಹುದು ಎಂಬುದು ಬಸವರಾಜು ಸಂತೇಶಿವರರ ಸ್ವಂತ ಅನುಭವ.

ಮೂಲ: ಬಸವರಾಜು ಸಂತೇಶಿವರ, ಚೆನ್ನರಾಯಪಟ್ಟಣ (ತಾ), ಹಾಸನ (ಜಿ)

ನುಸಿ ಪೀಡೆಗೆ ತಾಮ್ರದ ಮದ್ದು

ತೆಂಗಿನ ಬೆಳೆಗಾರರಿಗೆ ತೀವ್ರ ತಲೆನೋವಾಗಿರುವ, ರೈತರ ಬದುಕಿನ ಆಸರೆಯನ್ನೇ ಕತ್ತರಿಸಿರುವ 'ನುಸಿ ಪೀಡೆ'ಗೆ ದೊಡ್ಡಬಳ್ಳಾಪುರ ತಾಲ್ಲೂಕಿನ ಕುಂಬಾರ ಪೇಟೆಯ ರೈತ ಶ್ರೀ ಡಿ.ಸಿ. ಶಿವಣ್ಣನವರು ಸುಲಭ ಪರಿಹಾರ ಕಂಡು ಹಿಡಿದಿದ್ದಾರೆ. ಬಾಲ್ಯದಲ್ಲಿ ತಮ್ಮ ಕಾಲಿನಲ್ಲಿ ಆದ ಗಾಯಕ್ಕೆ ಗೋಮೂತ್ರದಲ್ಲಿ ತೊಳೆದು ಕಟ್ಟಿದ್ದ ತಾಮ್ರದ ಹಾಳೆ ಮದ್ದಾಗಿದ್ದನ್ನು ನೆನೆದು ಸ್ಫೂರ್ತಿಗೊಂಡ ಇವರು ಒಂದು ವಿನೂತನ ಪ್ರಯೋಗ ಮಾಡಿದ್ದಾರೆ. ಎಂಟರಿಂದ ಒಂಬತ್ತು ಇಂಚು ಉದ್ದದ ತಾಮ್ರದ ಮೊಳೆಯೊಂದನ್ನು ಮರದ ಬುಡದಿಂದ ಮೂರು ಅಡಿ ಎತ್ತರದಲ್ಲಿ



ಕಾಂಡದೊಳಕ್ಕೆ ಗೋಡೆಗೆ ಮೊಳೆ ಹೊಡೆದಂತೆ ಹೊಡೆದು ಇನ್ನೊಂದು ತಾಮ್ರದ ತುಂಡನ್ನು ಕೆಲವು ಇಂಚುಗಳ ಅಂತರದಲ್ಲಿ ಲಂಬವಾಗಿ ಕಾಂಡದೊಳಕ್ಕೆ ಹೊಡೆಯಬೇಕು. ಹೀಗೆ ಮಾಡುವುದರಿಂದ ನುಸಿ ಪೀಡೆ ಕ್ರಮೇಣ ಹತೋಟಿಯಾಗುತ್ತದೆ ಎಂಬುದು ಇವರ ಅನುಭವ.

ಕಾಯಿಕೊರಕ ನಿಯಂತ್ರಣ

ತೊಗರಿ, ಅವರೆ ಮತ್ತಿತರ ದ್ವಿದಳ ಧಾನ್ಯ ಬೆಳೆಗಳಲ್ಲಿ ಕಾಯಿಕೊರಕ (Pod borer) ಕೀಟದ ಹಾವಳಿ ಹೆಚ್ಚು. ಇದರ ಹತೋಟಿಗಾಗಿ ರೈತರು ಇತ್ತೀಚೆಗೆ ರಾಸಾಯನಿಕ ಕೀಟನಾಶಕಗಳನ್ನು ಹೆಚ್ಚು ಹೆಚ್ಚಾಗಿ ಬಳಸತೊಡಗಿದ್ದಾರೆ. ಇದು ಬೆಳೆಯ ವೆಚ್ಚ ಹೆಚ್ಚಿಸುವುದರ ಜೊತೆಗೆ ಪರಿಸರಕ್ಕೂ ಹಾನಿಕರ. ಈ ಸಂದರ್ಭದಲ್ಲಿ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಕಾಡು ಪ್ರದೇಶದ ಒಬ್ಬ ರೈತ ಶ್ರೀ ಪ್ರಸನ್ನಯ್ಯ ಎಸ್.ಸಿ. ಸಸ್ಯ ಮೂಲದ ಕೀಟನಾಶಕವೊಂದನ್ನು ತಯಾರಿಸಿದ್ದಾರೆ. ಇದನ್ನು ಹಲವಾರು ರೈತರು ಬಳಸಿ ಯಶಸ್ವಿಯಾಗಿದ್ದಾರೆ. ಅಲ್ಲದೆ ಬೆಂಗಳೂರಿನ 'ಗ್ರೀನ್ ಪ್ರತಿಷ್ಠಾನ' ಇದರ ಬಳಕೆಗೆ ಶಿಫಾರಸ್ಸು ಮಾಡುತ್ತಿದೆ.

ತಲಾ ಅರ್ಧ ಕೆ.ಜಿ. ಕಾಡು ಸುಂಡೆ (*Solanum indicum*), ಎಟ್ಟಿಕಾಯಿ (*Adina cordifolia*), ಉರುಗಲ, ಲಕ್ಕಿ (*Vitex negunda*) ಲೋಳೆ ಸರ (*Aloe vera*), ವಿಷಮದಾರಿ (*Clerodendron inerme*) ಸೊಪ್ಪುಗಳು, ಅರ್ಧ ಕೆ.ಜಿ ಉರುಗಲ ತೊಗಟೆ ಮತ್ತು ಕಾಲು ಕೆ.ಜಿ. ಬೇವಿನ ಬೀಜಗಳನ್ನು ಬೇರೆ ಬೇರೆಯಾಗಿ ಕುಟ್ಟಿ, ಮಣ್ಣಿನ ಮಡಿಕೆಯೊಂದರಲ್ಲಿ ಹಾಕಿ, ಅವು ಮುಳುಗುವಷ್ಟು ಪ್ರಮಾಣದ ಗಂಜಲವನ್ನು ಹಾಕಿ ಮಡಿಕೆಯ ಬಾಯಿಯನ್ನು ಮುಚ್ಚಬೇಕು. ಒಂದು ವಾರದ ನಂತರ ಈ ದ್ರಾವಣವನ್ನು ಚೆನ್ನಾಗಿ ಸೋಸಿ (ಶೋಧಿಸಿ) ನೀರಿನೊಂದಿಗೆ 1:10ರ ಪ್ರಮಾಣದಲ್ಲಿ ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಅವರೆ ಕಾಯಿಯಲ್ಲಿ ಕಾಯಿಕೊರಕದ ಹಾವಳಿ ತುಂಬಾ ಇರುವಾಗ 1:8ರ ಪ್ರಮಾಣದಲ್ಲಿ ನೀರಿನೊಂದಿಗೆ ಬೆರೆಸಿ ಸಿಂಪಡಿಸಬೇಕು ಎಂಬುದು ಈ ಹೊಸ ಶೋಧನೆಯ ಸಾರಾಂಶ.

ಕಲ್ಲಂಗಡಿ ಮತ್ತು ಟೊಮೊಟೊಗಳಲ್ಲಿ ನುಸಿ ನಿಯಂತ್ರಣ

ಬೆಂಗಳೂರು ಗ್ರಾಮಾಂತರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು ದಾಸೇಗೌಡನ ದೊಡ್ಡಿಯ ರಾಮಕೃಷ್ಣಯ್ಯನವರು ನುಸಿ ನಿಯಂತ್ರಣಕ್ಕಾಗಿ ಸಸ್ಯ ಮೂಲದ ಕೀಟನಾಶಕವೊಂದನ್ನು ಅಭಿವೃದ್ಧಿಪಡಿಸಿದ್ದಾರೆ. ತಲಾ ಒಂದು ಕೆ.ಜಿ. ಬೇವಿನ ಸೊಪ್ಪು, ಲಕ್ಕಿ ಸೊಪ್ಪು (*Vitex negundo*), ಗ್ಲಿರಿಸಿಡಿಯಾ ಸೊಪ್ಪು, ರಾಂಫಲ ಸೊಪ್ಪು (*Annona sp.*) ಮತ್ತು ಅರ್ಧ ಕೆ.ಜಿ. ವಿಷಮದಾರಿ (*Clerodendron inerme*) ಸೊಪ್ಪುಗಳನ್ನು ಚೆನ್ನಾಗಿ ಕುಟ್ಟಿ 10 ಲೀಟರ್ ಹಸುವಿನ ಗಂಜಲದಲ್ಲಿ 20-25 ದಿನಗಳವರೆಗೆ ನೆನೆಸಿಡಬೇಕು. ನಂತರ ಶೋಧಿಸಿ 1:4ರ ಪ್ರಮಾಣದಲ್ಲಿ ನೀರಿನೊಂದಿಗೆ ಬೆರೆಸಿ ಗಿಡಗಳಿಗೆ ಸಿಂಪಡಿಸಬೇಕು. ಹೀಗೆ ಸಿಂಪಡಿಸುವುದರಿಂದ ಕಲ್ಲಂಗಡಿ ಮತ್ತು ಟೊಮೆಟೊಗಳ ನುಸಿ (Aphids) ಮತ್ತು ಥ್ರಿಪ್ಸ್ (Thrips) ಕೀಟಗಳು ನಿಯಂತ್ರಣಕ್ಕೆ ಬರುತ್ತವೆ. ಬಾಳೆಯ ಗಿಡದ ಬುಡಕ್ಕೆ 1/2 ಲೀಟರ್ ದ್ರಾವಣ ಹಾಕಿದರೆ ಗಿಡವು ರೋಗ ಮುಕ್ತವಾಗುತ್ತೆ.

ಸಂಗ್ರಹ: ಜಿ. ಕೃಷ್ಣ ಪ್ರಸಾದ್, ಗ್ರೀನ್ ಪ್ರತಿಷ್ಠಾನ

ಪರಂಗಿ ನಂಜಾಣು ರೋಗದ ಹತೋಟಿ

ಒಂದು ಕೆ.ಜಿ. ಬೋಗನ್ ವಿಲ್ಲಾ ಎಲೆಗಳನ್ನು 9-10 ಲೀಟರ್ ನೀರಿನಲ್ಲಿ ಒಂದು ದಿನ ನೆನೆಸಿ ಮರುದಿನ ಮುಂಜಾನೆ ಒಂದು ಲೀಟರ್ ಕೆನೆ ರಹಿತ ಆಕಳ ಹಾಲಿನಲ್ಲಿ ಬೆರೆಸಿ ಮಿಶ್ರಣ ಮಾಡಬೇಕು. ಈ ದ್ರಾವಣವನ್ನು ಸೋಸಿ 189 ಲೀಟರ್ ನೀರಿನಲ್ಲಿ ಬೆರೆಸಿ ಪರಂಗಿ ಗಿಡಗಳ ವಯಸ್ಸಿಗನುಗುಣವಾಗಿ ಹದಿನೈದು ದಿವಸಗಳಿಗೊಮ್ಮೆ ಬೇರಿನ ಮೂಲಕ ಉಣಿಸಬೇಕು. ಹೀಗೆ ಮಾಡುವುದರಿಂದ ಪರಂಗಿ ಬೆಳೆಯಲ್ಲಿ ನಂಜಾಣು ರೋಗವನ್ನು ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು ಎಂಬುದು ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಹೊನ್ನಾಪುರದ ಶ್ರೀ ಚಂದ್ರಶೇಖರ ಎಸ್. ಚಿನವಾಲರ ಶೋಧನೆ.

(ಈ ಮೇಲಿನ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಪ್ರಶಸ್ತಿಯ ಆಯ್ಕೆಗೆ ಕಳುಹಿಸಲಾಗಿದೆ)

ಎಕ್ಕ (*Calotropis gigantea*)ದ ಬಳಕೆ

ಎಕ್ಕದ ಹಾಲನ್ನು (ಅಂಟು) ಸಂಗ್ರಹಿಸಿ 1:15ರ ಪ್ರಮಾಣದಲ್ಲಿ ನೀರಿನೊಂದಿಗೆ ಬಳಸಿ ಬೆಳೆಗಳಿಗೆ ಸಿಂಪಡಿಸುವುದರಿಂದ ಕಂಬಳಿ ಹುಳುಗಳನ್ನು ಕೇವಲ ಮೂರು ದಿನಗಳಲ್ಲಿ ಪರಿಣಾಮಕಾರಿಯಾಗಿ ಹತೋಟಿ ಮಾಡಬಹುದು. 8-10 ಕೆ.ಜಿ. ಎಲೆಗಳನ್ನು ಒಂದು ದಿನದ ಕಾಲ ನೀರಿನಲ್ಲಿ ನೆನೆಸಿ ಸೋಸಿದ ನಂತರ ಗೆದ್ದಲು ಹತ್ತಿದ (ಭೂಮಿಗೆ) ಮಣ್ಣಿಗೆ ಸುರಿದರೆ ಗೆದ್ದಲು ಮಾಯವಾಗುತ್ತದೆ.

ಮೊಂಡು ಕಳ್ಳಿ (*Euphorbia tirucalli*)ಯ ಉಪಯೋಗ

ಬೇಲಿ ಗಿಡವಾಗಿ ಯಥೇಚ್ಛವಾಗಿ ಬೆಳೆಯಲ್ಪಡುವ ಇದು ಕೊಳವೆಯಾಕಾರದ (ಕಾಂಡ) ಕವಲುಗಳು ಮತ್ತು ಉದ್ದನೆಯ ಎಲೆಗಳುಳ್ಳ ಗಿಡ. ಒರಟಾದ ತೊಗಟೆ ಹೊಂದಿದ್ದು ಗಾಯ ಮಾಡಿದರೆ ಬಿಳಿ ಹಾಲು ಸುರಿಯುತ್ತದೆ. ಈ ಹಾಲು,



ಮೊಂಡು ಕಳ್ಳಿ

ಹೇನು, ಗೆದ್ದಲು, ಕತ್ತರಿ ಹುಳು (Cutworm) ಮತ್ತು ಕಾಡಿಗೆ ರೋಗಗಳಿಗೆ ಪರಿಣಾಮಕಾರಿ ಔಷಧ. ಬಲಿತ ಕಾಂಡಗಳನ್ನು ಕತ್ತರಿಸಿಕೊಂಡು, ಅವನ್ನು ಚೆನ್ನಾಗಿ ಜಜ್ಜಿ ಪೇಸ್ಟಿನ ರೂಪಕ್ಕೆ ಬಂದ ನಂತರ ಸುಮಾರು ಹತ್ತು ಲೀಟರ್ ನೀರಿನಲ್ಲಿ ಅದ್ದಿರಿ. ಆಗ ಅದರ ಅರ್ಧ ರಸ ನೀರಿನೊಂದಿಗೆ ಸೇರುತ್ತದೆ. ನಂತರ ದ್ರಾವಣವನ್ನು ಸೋಸಿ ಹೇನು, ಗೆದ್ದಲು ಮತ್ತು ಕಾಡಿಗೆ ರೋಗಗಳಿಗೆ ಸಿಂಪಡಿಸಬಹುದು. ಕತ್ತರಿ ಹುಳುಗಳ ನಿಯಂತ್ರಣಕ್ಕಾಗಿ, ಸುಮಾರು ಹತ್ತು ತೊಟ್ಟು ಹಾಲನ್ನು ಒಂದು ಲೀಟರ್ ನೀರಿನಲ್ಲಿ ಕಲಸಿ ಬಳಸಬೇಕು.

ಮೂಲ: *Indegenous Agriculture News, 1(4), Sep. 2002*

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಹಿತ್ತಲಗಿಡದ ಎರಡು ಸಾವಿರದ ಇಸವಿಯವರೆಗಿನ ಎಲ್ಲಾ ಸಂಚಿಕೆಗಳು ಲಭ್ಯವಿರುತ್ತವೆ. ರೂ. 350/- ಪಾವತಿ ಮಾಡಿ ಪಡೆದುಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ಕಾಡುಮೆಣಸಿನ ಹಲವು ಔಷಧಿ ಗುಣಗಳು

ಕಾಡು (ಕಾಳು) *(Piper nigrum L)* ಮೆಣಸು ಒಂದು ಬಳ್ಳಿ. ಅಡಿಕೆ, ತೆಂಗು, ಮಾವು ಮುಂತಾದ ಮರಗಳ ಮೇಲೆ 8-10 ಮೀಟರ್ ಎತ್ತರಕ್ಕೆ ಹಬ್ಬುತ್ತದೆ. ಈ ಬಳ್ಳಿಯ ಕಾಳು ಹಸಿರಾಗಿದ್ದು ಹಣ್ಣು ಆಗುವ ಮುನ್ನ ಬಿಡಿಸಿ ಕಪ್ಪು ಬಣ್ಣಕ್ಕೆ ತಿರುಗುವವರೆಗೆ ಒಣಗಿಸಿ ಉಪಯೋಗಿಸಲಾಗುತ್ತದೆ. ಇದು ನೆಟ್ಟ ನಾಲ್ಕನೇ ವರ್ಷದಲ್ಲಿ ಫಲ ನೀಡಲು ಪ್ರಾರಂಭಿಸುತ್ತದೆ. ಭಾರತದ ಸಾಂಬಾರ ಪದಾರ್ಥಗಳಲ್ಲಿ ಒಂದಾದ ಕಾಡು ಮೆಣಸು ಆಯುರ್ವೇದದಲ್ಲಿ ಮುಖ್ಯ ಪಾತ್ರವಹಿಸಿದೆ. ಸಂಸ್ಕೃತದಲ್ಲಿ ಮರೀಚಂ, ಕೃಷ್ಣಂ ಎಂದೂ, ಹಿಂದಿಯಲ್ಲಿ ಕಾಲಿ ಮಿರ್‌ಚ್ ಎಂದೂ, ತೆಲುಗಿನಲ್ಲಿ ಮರಿಯಾ ಎಂದೂ, ತಮಿಳಿನಲ್ಲಿ ನಲ್ಲ ಮಿಳಗ ಎಂದೂ ಕರೆಯಲ್ಪಡುವ ಇದು ಕಫ, ಶೀತ, ವಾಯುಬಾಧೆ ಮುಂತಾದವುಗಳನ್ನು ನಿವಾರಿಸುವ ಗುಣ ಹೊಂದಿದೆ. ಇದನ್ನು ಬಳಸಬಹುದಾದ ಕೆಲವು ವಿಧಾನಗಳು ಇಲ್ಲಿವೆ.

ಜ್ವರ ನಿವಾರಣೆಗೆ: 2 ಚಮಚ ಕಾಳು ಮೆಣಸು, 1 ಚಮಚ ಜೀರಿಗೆ, 2 ಚಮಚ ಕೊತ್ತಂಬರಿ, ಚಿಟಿಕೆ ಅರಿಸಿನ ಪುಡಿ, ನಯವಾಗಿ ಪುಡಿ ಮಾಡಿಕೊಳ್ಳಬೇಕು. ಈ ಪುಡಿಗಳನ್ನು 4 ಲೋಟ ಹಾಲಿನೊಡನೆ ಚೆನ್ನಾಗಿ ಕುದಿಸಬೇಕು. ನಂತರ ಸ್ವಲ್ಪ ಸಕ್ಕರೆ ಬೆರೆಸಿ ದಿನಕ್ಕೆ 3 ಬಾರಿ ಕೊಡುವುದರಿಂದ ಜ್ವರ ನಿವಾರಣೆ ಆಗುತ್ತದೆ.

ಕೆಮ್ಮು ನಿವಾರಣೆಗೆ: 2 ಚಮಚ ಕಾಳು ಮೆಣಸು, 1 ಚಮಚ ಜೀರಿಗೆ, 1 ಶುಂಠಿ ತುಂಡುಗಳನ್ನು ನಯವಾಗಿ ಚೂರ್ಣ ಮಾಡಿ 4 ಲೋಟ ನೀರಲ್ಲಿ ಬೆಲ್ಲ ಹಾಕಿ ಕುದಿಸಬೇಕು. ಸ್ವಲ್ಪ ಬಿಸಿ ಇರುವಾಗಲೇ ನಿಂಬೆ ರಸವನ್ನು ಬೆರೆಸಿ ಕೆಮ್ಮು ಬಂದಾಗ ಆಗಾಗ್ಗೆ ಸ್ವಲ್ಪ ಸ್ವಲ್ಪ ಕುಡಿಯುತ್ತಾ ಇದ್ದರೆ ಥಂಡಿ ಕೆಮ್ಮು ನಿವಾರಣೆ ಆಗುತ್ತದೆ.

ತಲೆನೋವು ನಿವಾರಣೆಗೆ: 1 ಚಮಚ ಕಾಳು ಮೆಣಸು, ಜೀರಿಗೆ, 1ಚಮಚ ಅಜವಾನಗಳನ್ನು ಪುಡಿ ಮಾಡಿ ನೀರಲ್ಲಿ ಚೆನ್ನಾಗಿ ಕುದಿಸಿ, ಸ್ವಲ್ಪ ಉಪ್ಪು, ನಿಂಬೆ ರಸ ಬೆರೆಸಿ ಕುಡಿಯುವುದರಿಂದ ವಾಯುವಿನಿಂದ ಬರುವ ತಲೆನೋವು ನಿವಾರಣೆ ಆಗುತ್ತದೆ.

ಬಿದ್ದ ನೋವು ನಿವಾರಣೆಗೆ: ಸ್ವಲ್ಪ ಮೆಣಸಿನ ಕಾಳನ್ನು ನಯವಾಗಿ ಹಾಲಲ್ಲಿ ಅರೆಯಬೇಕು (ತಿರುವ ಬೇಕು) ನಂತರ ಒಮ್ಮೆ ಬಿಸಿ ಮಾಡಿ ಬಿದ್ದು ನೋವಾದ ಜಾಗಕ್ಕೆ ಆಗಾಗ್ಗೆ ಲೇಪಿಸುವುದರಿಂದ ನೋವು ನಿವಾರಣೆ ಆಗುತ್ತದೆ. ಗಾಯಗಳಾಗಿದ್ದರೆ ಹಚ್ಚ ಬಾರದು. ಗಾಯಕ್ಕೆ ಹಚ್ಚಿದರೆ ಉರಿಯಾಗುತ್ತದೆ.

ಉಗುರು ಸುತ್ತು ನಿವಾರಣೆಗೆ: ಮೆಣಸಿನ ಕಾಳನ್ನು ಎಮ್ಮೆ ಹಾಲಲ್ಲಿ ಅರೆದು ಬಿಸಿ ಮಾಡಿ ಹಚ್ಚಿದರೆ ಉಗುರು ಸುತ್ತು ನಿವಾರಣೆ ಆಗುತ್ತದೆ.

ಅಜೀರ್ಣ ನಿವಾರಣೆಗೆ: ಕಾಳು ಮೆಣಸು ಮತ್ತು ಏಲಕ್ಕಿಗಳನ್ನು ಸಮ ಪ್ರಮಾಣದಲ್ಲಿ ಪುಡಿ ಮಾಡಿ, ಅಷ್ಟೇ ಸಕ್ಕರೆ ಬೆರೆಸಿ ದಿನಕ್ಕೆ ಮೂರರಿಂದ ನಾಲ್ಕು ಬಾರಿ 1/4 ಚಮಚ ಪುಡಿ ತಿನ್ನುವುದರಿಂದ ಅಜೀರ್ಣ ಪರಿಹಾರವಾಗುತ್ತದೆ.

ವಾತದ ನೋವು ನಿವಾರಣೆಗೆ: ಕಾಳು ಮೆಣಸು, ಕಾಳು ಜೀರಿಗೆ, ಬೆಳ್ಳುಳ್ಳಿ ಮತ್ತು ಅಜವಾನಗಳನ್ನು ಜಜ್ಜಿ ಎಳ್ಳೆಣ್ಣೆಯಲ್ಲಿ ಕುದಿಸಿ ನೋವು ಇದ್ದ ಜಾಗಕ್ಕೆ ಹಚ್ಚಿ, ತಿಕ್ಕಿ ಸ್ನಾನ ಮಾಡುವುದರಿಂದ ವಾತದ ನೋವು ನಿವಾರಣೆ ಆಗುತ್ತದೆ.

ನೆಗಡಿ ಮತ್ತು ಶೀತ ನಿವಾರಣೆಗೆ: ಕಾಳು ಮೆಣಸಿನ ಪುಡಿ, ಶುಂಠಿ ಪುಡಿ ಮತ್ತು ಹಿಪ್ಲಿ ಪುಡಿಗಳನ್ನು (ಕಡಿಮೆ ಪ್ರಮಾಣ) ಬೆರೆಸಿ ಬೆಲ್ಲದೊಂದಿಗೆ ದಿನಕ್ಕೆ ಮೂರು ಬಾರಿ ತೆಗೆದು ಕೊಳ್ಳುವುದರಿಂದ ನೆಗಡಿ ಮತ್ತು ಶೀತ ಕಡಿಮೆ ಆಗುತ್ತದೆ.

ಒಣಕೆಮ್ಮು ನಿವಾರಣೆಗೆ: ಕಾಳು ಮೆಣಸು, ವಾಟೆ ಪುಡಿ ಮತ್ತು ಉಪ್ಪು ಬೆರೆಸಿಟ್ಟುಕೊಂಡು ಆಗಾಗ್ಗೆ ತಿನ್ನುತ್ತಾ ಇದ್ದರೆ ಒಣ ಕೆಮ್ಮು ನಿವಾರಣೆ ಆಗುತ್ತದೆ.

ಲೇಖನ: ಎಸ್ ಗಾಯತ್ರಿ, ಸುಬ್ಬರಾವ್, ಶಿರೂಮನೆ, ಹೊನ್ನೇಸರ ಅಂಚೆ ಸಾಗರ (ತಾ), ಶಿವಮೊಗ್ಗ (ಜಿ)

ಸಂಗ್ರಹ: ಸುದರ್ಶನ, ಅಡಿಕೆ ಪತ್ರಿಕೆ

ಬಸವರಾಜು ಸಂತೇಶಿವರರ ಸಾವಯವ ಪದ್ಧತಿಗಳು

ಭತ್ತದ ಸಾವಯವ ಕೃಷಿ

ಪ್ರತಿ ವರ್ಷ ಮಣ್ಣಿನ ಮೇಲ್ಮೈ ಸುಮಾರು 0.1 ಸೆ.ಮೀ.ನಷ್ಟು ಕಡಿಮೆಯಾಗುತ್ತದೆಯಂತೆ. ಆದ್ದರಿಂದ ಕೆರೆಗೋಡನ್ನು ಹೊಲ ಗದ್ದೆಗಳಿಗೆ ಸೇರಿಸುವುದು ಒಳಿತು. ಮಣ್ಣಿನ ಫಲವತ್ತತೆ ಹೆಚ್ಚಾಗಬೇಕಾದರೆ ಹಸಿರು ಗೊಬ್ಬರವನ್ನು ಬಳಸಬೇಕು. ಇದಕ್ಕಾಗಿ ಮೇ ತಿಂಗಳಲ್ಲಿ ದ್ವಿದಳ ಧಾನ್ಯಗಳನ್ನು ಬಿತ್ತಿ, ನಾಟಿ ಕಾಲದಲ್ಲಿ ಅವುಗಳ ಸೊಪ್ಪನ್ನು ಮಣ್ಣಿನಲ್ಲಿ ಮಿಶ್ರ ಮಾಡಬೇಕು.

ಸಸಿ ಮಡಿ ಮತ್ತು ಬೀಜ ಉಪಚಾರ

ಸಸಿ ಮಡಿಗಳನ್ನು ತಯಾರಿಸುವಾಗ ಕಾಂಪೋಸ್ಟ್ ಗೊಬ್ಬರವನ್ನು ಉಪಯೋಗಿಸಿ. ಹೊಂಗೆ, ಎಕ್ಕ, ತಂಗಡಿ ಮತ್ತು ಗ್ಲಿರಿಸಿಡಿಯಾ ಎಲೆಗಳನ್ನು (ಚಿಕ್ಕ ರೆಂಬೆಗಳನ್ನು) ಅರ್ಧ ಅಡಿ ಗಾತ್ರಕ್ಕೆ ಕತ್ತರಿಸಿ ಅರ್ಧ ಅಡಿ ದಪ್ಪಕ್ಕೆ ಹರಡಿ ಗಂಜಲವನ್ನು ಸುರಿಯಿರಿ. ಒಂದು ವಾರದ ನಂತರ ಕೊಳೆತ ಎಲೆಗಳನ್ನು ಸಸಿ ಮಡಿಗೆ ಹಾಕಿ ಮಣ್ಣಿನೊಂದಿಗೆ ಚೆನ್ನಾಗಿ ಮಿಶ್ರ ಮಾಡಿ.

ಬಿತ್ತುವ ಮೊದಲು ಬಿತ್ತನೆ ಬೀಜಗಳನ್ನು 24 ಗಂಟೆಗಳ ಕಾಲ ನೀರಿನಲ್ಲಿ ನೆನೆಸಿ. ನಂತರ ಬೀಜಗಳನ್ನು ಬಿಸಿ ನೀರಿಗೆ ಹಾಕಿ ಇದಕ್ಕೆ ಬೇವು, ಹೊಂಗೆ, ತಂಗಡಿ ಮತ್ತು ಎಕ್ಕದ ಎಲೆಗಳ ಚೂರುಗಳನ್ನು ಹಾಕಿ ಚೆನ್ನಾಗಿ ಮಿಶ್ರ ಮಾಡಿ. ಈಗ ಈ ಮಿಶ್ರಣವನ್ನು ದೊಡ್ಡ ಚೀಲದಲ್ಲಿ ತುಂಬಿ ಹಗ್ಗದಿಂದ ಬಿಗಿಯಾಗಿ ಕಟ್ಟಿ. ಹೀಗೆ ಮಾಡಿದಾಗ ಚೀಲದೊಳಗೆ ಶಾಖ ಉತ್ಪತ್ತಿಯಾಗುತ್ತದೆ. ಇದಾದ ಆರು ಗಂಟೆಗಳ ನಂತರ ಚೀಲವನ್ನು ಮತ್ತೊಮ್ಮೆ ಬಿಸಿ ನೀರಿನಲ್ಲಿ ಅದ್ದಿ ಬಿಸಿಯಾಗಿರುವ ಸ್ಥಳದಲ್ಲಿ ಇಡಿ. ಹೀಗೆ ಮಾಡಿದರೆ ಬೀಜಗಳು ಸಮ ಪ್ರಮಾಣದಲ್ಲಿ ಉತ್ತಮವಾಗಿ ಮೊಳಕೆ ಒಡೆಯುತ್ತವೆ.

ಪ್ರತಿ ಚದರ ಮೀಟರಿಗೆ 60 ಗ್ರಾಂ.ಗಳಂತೆ ಮೊಳೆತ ಬೀಜಗಳನ್ನು ಬಿತ್ತಿ ಮಣ್ಣಿನೊಂದಿಗೆ ಚೆನ್ನಾಗಿ ಮಿಶ್ರ ಮಾಡಿ. ಈಗ ಲಭ್ಯವಿರುವ ನೈಸರ್ಗಿಕ ವಸ್ತುಗಳಾದ ಕೊಳೆತ ಹಣ್ಣುಗಳು, ತರಕಾರಿಗಳು, ಕಳೆ ಗಿಡಗಳು, ಸಗಣಿ ಮತ್ತು ಗಂಜಲಗಳನ್ನು ಕೊಳೆ ಹಾಕಿ ರಸ ತಯಾರಿಸಿಕೊಳ್ಳಿ. ಈ ರಸವನ್ನು ಬಿತ್ತನೆಯಾದ ಹತ್ತು ದಿನಗಳ ನಂತರ ಸಸಿ ಮಡಿಗೆ ಸಿಂಪಡಿಸಿ. ಹೀಗೆ ಮಾಡಿದರೆ 18-20 ದಿನಗಳಲ್ಲಿ ಆರೋಗ್ಯಕರ ಸಸಿಗಳು ನೆಡಲು ಸಿದ್ಧವಾಗುತ್ತವೆ.

ನಾಟಿ ನಂತರ


ಗದ್ದೆಗಳನ್ನು ನಾಟಿ ಮಾಡುವ 20 ದಿನಗಳ ಮೊದಲೇ ತಯಾರು ಮಾಡಬೇಕು. ಹೀಗೆ ಮಾಡುವುದರಿಂದ ಹಿಂದಿನ ಬೆಳೆಯ ಉಳಿಕೆ ಬೀಜಗಳು ಮತ್ತು ಕಳೆ ಬೀಜಗಳು ಸಾಯುತ್ತವೆ. ಹಸಿರು ಗೊಬ್ಬರ ಮತ್ತು ಕಾಂಪೋಸ್ಟ್‌ಗಳನ್ನು ನಾಟಿಗೆ ನಾಲ್ಕು ದಿನಗಳ ಮೊದಲು ಮಣ್ಣಿನೊಂದಿಗೆ ಮಿಶ್ರ ಮಾಡಬೇಕು. ಆಗ ಪ್ರತಿ ಎಕರೆಗೆ ತಲಾ ಹತ್ತು ಕೆ.ಜಿ. ಬೇವು, ಹಿಪ್ಪೆ ಮತ್ತು ಹುಣಸೆ ಬೀಜಗಳು ಮತ್ತು 25 ಕೆ.ಜಿ. ಹೊಂಗೆ ಬೀಜಗಳನ್ನು ಎರಚಬೇಕು. ನಂತರ ಗದ್ದೆಯ ಪ್ರತಿಯೊಂದು ಭಾಗದಲ್ಲೂ ಸಮ ಪ್ರಮಾಣದ ನೀರು ನಿಲ್ಲಿಸಿ ಪ್ರತಿ ಗುಣಿಗೆ 2-3 ಸಸಿಗಳಂತೆ ಪ್ರತಿ ಚದರ ಮೀಟರ್ ಭೂಮಿಗೆ 60 ಗುಣಿಗಳನ್ನು ನೆಡಬೇಕು. ನಾಟಿಯಾದ ಮೇಲೆ ಒಂದು ವಾರದವರೆಗೆ ಒಂದು ಅಂಗುಲ ನೀರು ನಿಲ್ಲಿಸಿ ನಂತರ ಎರಡು ಅಂಗುಲ ನೀರು ನಿಲ್ಲಿಸಬೇಕು.

ನಾಟಿ ಮುಗಿದ 15 ದಿನಗಳಿಗೆ ಕಳೆ ತೆಗೆದು ತಲಾ 25 ಲೀಟರ್ ಹಸು-ಎಮ್ಮೆ ಗಂಜಲ, ಕತ್ತೆ ಗಂಜಲ ಮತ್ತು ನೀರಿನ ಮಿಶ್ರಣವನ್ನು ಸಿಂಪಡಣೆ ಮಾಡಿ. ಇದೇ ರೀತಿ ನಾಟಿ ಮಾಡಿದ 30 ದಿನಗಳ ನಂತರವೂ ಸಿಂಪಡಿಸಿ. ನಾಟಿ ಮಾಡಿದ 40 ದಿನಗಳ ನಂತರ ಸದ್ದಲಿ (ಜೇಡ) ಹುಳುಗಳನ್ನು ಬಿಡಿ. ಇವುಗಳು ಕೇವಲ ನಾಲ್ಕು ದಿನಗಳಲ್ಲಿ ಬಲೆ ಕಟ್ಟಿ ಕೀಟಗಳನ್ನು ನಿಯಂತ್ರಿಸುತ್ತವೆ. ಗದ್ದೆಗಳ ಸುತ್ತ ಮರ ಬೆಳೆಸಿದರೆ ರಾತ್ರಿ ವೇಳೆಯಲ್ಲಿ ಗೂಬೆಗಳು ಕುಳಿತು ಇಲಿಗಳ ಕಾಟವನ್ನು ತಡೆಗಟ್ಟುತ್ತವೆ. ಬೆಳೆ ಕಾಳು ಕಟ್ಟಿದ ನಂತರ ಒಂದು ಅಂಗುಲ ನೀರನ್ನಷ್ಟೇ ನಿಲ್ಲಿಸಿ ಬೆಳೆ ಹಳದಿ ಬಣ್ಣಕ್ಕೆ ತಿರುಗಿದ ಮೇಲೆ ನೀರನ್ನು ತಡೆಯಿರಿ.

ಈ ವಿಧಾನವನ್ನು ಅಳವಡಿಸಿಕೊಳ್ಳುವುದರಿಂದ ಪ್ರತಿ ಎಕರೆಗೆ 40 ಕ್ವಿಂಟಾಲ್‌ಗಳಷ್ಟು ಉತ್ತಮ ಇಳುವರಿ ಪಡೆಯಬಹುದಲ್ಲದೆ ಮಣ್ಣಿನ ಆರೋಗ್ಯವನ್ನು ಹೆಚ್ಚಿಸಬಹುದು. ಇದರ ಜೊತೆಗೆ ನಾನು ಭತ್ತ, ಬದನೆ, ಟೊಮೆಟೊ ಬೆಳೆಗಳ ಹಳೆಯ (ದೇಶೀಯ) ತಳಿಗಳನ್ನು 20 ವರ್ಷಗಳಿಂದ ಸಂರಕ್ಷಿಸಿ ನನ್ನ ನೆರೆ ಹೊರೆಯ ರೈತರಿಗೆ ಕೊಡುತ್ತಿದ್ದೇನೆ. ಅವರೂ ಕೂಡ ಈ ವಿಧಾನವನ್ನು ಅನುಸರಿಸಿ ಉತ್ತಮ ಫಸಲು ಪಡೆಯುತ್ತಿದ್ದಾರೆ.

ಮಳೆ ಕುಯಿಲು

ಪ್ರತಿಯೊಬ್ಬರೂ ತಮ್ಮ ಭೂಮಿಯಿಂದ ಹೊರ ಹೋಗುವ ನೀರನ್ನು ಹಿಡಿದಿಟ್ಟುಕೊಳ್ಳಲು ಸಾಧ್ಯವಾದರೆ ಭೂಮಿಯ ಅಂತರ್ಜಲ ಹೆಚ್ಚುವುದಲ್ಲದೆ ಉತ್ತಮ ಬೆಳೆ ಸಾಧ್ಯವಾಗುತ್ತದೆ. ಇದೇ ದೃಷ್ಟಿಯಿಂದ ನಾನೂ ಕೂಡ ಕೃಷಿ ಮಾಡುತ್ತಾ ಬಂದಿದ್ದೇನೆ. ನನಗೆ 6 ಎಕರೆ ಜಮೀನಿದ್ದು ಜಮೀನಿನ ಮೇಲ್ಭಾಗದಲ್ಲಿ 150 ಮೀಟರ್ ಉದ್ದ, 20 ಮೀಟರ್ ಅಗಲ ಮತ್ತು 1.2 ಮೀಟರ್ ಆಳದ ಗುಂಡಿಯೊಂದನ್ನು ತೆಗೆಸಿರುತ್ತೇನೆ. ಮಳೆಗಾಲದಲ್ಲಿ ನನ್ನ ಜಮೀನಿನ ಹೊರಗಿನಿಂದ ಬರುವ ನೀರು ಇಲ್ಲಿ ಬಂದು ಶೇಖರವಾಗುತ್ತದೆ. ಹೀಗೆ ಶೇಖರಗೊಂಡ ನೀರು ಕಾಲುವೆಗಳ ಮುಖಾಂತರ ಜಮೀನಿನ ವಿವಿಧ ಭಾಗಗಳಿಗೆ ತಲುಪುತ್ತದೆ ಹಾಗೂ ನೀರು ಸಂಪೂರ್ಣ ಹೀರಲ್ಪಡುತ್ತದೆ. ಹೀಗೆ ಮಾಡುವುದರಿಂದ ವರ್ಷಪೂರ್ತಿ ಮಣ್ಣಿನ ಉಷ್ಣಾಂಶ 20-30^{0} ಸೆಲ್ಸಿಯಸ್ ಇರುವುದಲ್ಲದೆ ಉತ್ತಮ ಫಸಲನ್ನು ಪಡೆಯಲು ಸಾಧ್ಯವಾಗುತ್ತಿದೆ. ತೆರೆದ ಬಾವಿಯಲ್ಲಿ ಸುಮಾರು 10 ರಿಂದ 15 ಅಡಿಗಳ ಆಳದಲ್ಲಿ ನೀರು ಬರುತ್ತದೆ. ಹೀಗಾಗಿ ಬೇಸಿಗೆಯಲ್ಲಿ ನೀರಿನ ಕೊರತೆಯಾಗುವುದಿಲ್ಲ. ಜುಲೈ - ನವೆಂಬರ್ ತಿಂಗಳಲ್ಲಿ ಭತ್ತವನ್ನು, ಜನವರಿ - ಏಪ್ರಿಲ್ ತಿಂಗಳಲ್ಲಿ ರಾಗಿಯನ್ನು ಮತ್ತು ಮೇ-ಜುಲೈ ತಿಂಗಳಲ್ಲಿ ಹೆಸರು ಕಾಳನ್ನು ಬೆಳೆದು ಉತ್ತಮ ಉತ್ಪಾದನೆ ಪಡೆಯುತ್ತಿದ್ದೇನೆ.



* - ತೆಂಗು, Δ - ಗ್ಲಿರಿಸಿಡಿಯಾ, ↓ - ನೀರಿನ ಹರಿವು,

O - ತೆರೆದ ಬಾವಿ, o - ಕೊಳವೆ ಬಾವಿ, ● - ಅಡಿಕೆ

ಮಳೆ ಕುಯಿಲಿಗೆ ಮಾಸ್ಟರ್ ಯೋಜನೆ

ಸಾವಯವ ಯೂರಿಯಾ ಉತ್ಪಾದನೆ

ಬದುಕಿನಲ್ಲಿ ಉತ್ಸಾಹ ಮತ್ತು ಆಸಕ್ತಿ ಇದ್ದವರು ಏನು ಬೇಕಾದರೂ ಮಾಡಬಹುದು ಎಂಬುದನ್ನು ತಮಿಳುನಾಡಿನ ತಳ್ಳಿ ಬಳಿಯ ಮಾರುಪಳ್ಳಿ ಗ್ರಾಮದ ರೈತ ಚೂಡೇಗೌಡ ತೋರಿಸಿ ಕೊಟ್ಟಿದ್ದಾರೆ. ಇವರು ಗಂಜಲ ಮತ್ತು ಮರಳನ್ನು ಬಳಸಿ ಸಾವಯವ ಯೂರಿಯಾ ತಯಾರಿಸುತ್ತಿದ್ದಾರೆ. ಗಂಜಲವನ್ನು ಯೂರಿಯಾ ಬದಲಿಗೆ ಬಳಸಬಹುದು ಎಂಬುದನ್ನು ತಮಿಳುನಾಡು ಕೃಷಿ ಇಲಾಖೆ ನಡೆಸಿದ ತರಬೇತಿಯೊಂದರಲ್ಲಿ ತಿಳಿದ ಇವರು ಅದೇ ಗಂಜಲವನ್ನು ಬಳಸಿ ಯೂರಿಯಾವನ್ನೇಕೆ ತಯಾರಿಸಬಾರದು ಎಂದು ಆಲೋಚಿಸಿ "ಸಾವಯವ ಯೂರಿಯಾ"ವನ್ನು ಅಭಿವೃದ್ಧಿಪಡಿಸಿದ್ದಾರೆ. ಇದನ್ನು ಯಾವುದೇ ಖರ್ಚಿಲ್ಲದ ಸರಳ ವಿಧಾನದಲ್ಲಿ ತಯಾರಿಸಬಹುದು.

ಒಂದು ಸಿಮೆಂಟು ತೊಟ್ಟಿಯಲ್ಲಿ ಮುಕ್ಕಾಲು ಭಾಗದವರೆಗೆ ಮರಳು ತುಂಬಿ ಪ್ರತಿ ದಿನ ಲಭ್ಯವಿರುವಷ್ಟು ದನಗಳ ಗಂಜಲ ಹಾಕುತ್ತಾ ಹೋಗಿ. ಹೀಗೆ ಹಾಕುತ್ತಾ ಹೋದರೆ 15-20 ದಿನಗಳ ಒಳಗೆ ಮರಳು ಗಂಜಲ ಹೀರುವ ಪ್ರಮಾಣ ಕಡಿಮೆಯಾಗಿ ಗಂಜಲ ಮರಳಿನ ಮೇಲೆ ನಿಂತು ಕಪ್ಪಾಗುತ್ತದೆ. ಆಗ (ಗಂಜಲ ಸುರಿಯುವುದನ್ನು ನಿಲ್ಲಿಸಿ. ಒಂದು ವಾರ ಬಿಡಿ. ನಂತರ ಮರಳನ್ನು ತೊಟ್ಟಿಯಿಂದ ಹೊರ ತೆಗೆದು ನೆರಳಿನಲ್ಲಿ ಒಣಗಿಸಿ ಚೀಲದಲ್ಲಿ ಸಂಗ್ರಹಿಸಿಕೊಳ್ಳಿ. ಬೆಳೆಯಲ್ಲಿ ಸಾರಜನಕ ಕೊರತೆಯ ಲಕ್ಷಣಗಳು (ಹಳದಿ/ಕೆಂಪು ಬಣ್ಣಕ್ಕೆ ತಿರುಗುವುದು) ರಾಸಾಯನಿಕ ಯೂರಿಯಾ ಬದಲು ಈ "ಸಾವಯವ ಯೂರಿಯಾ"ವನ್ನು ಬಳಸಿ. ಬೆಳವಣಿಗೆ ಹಂತದಲ್ಲಿರುವ ಬೆಳೆಗೆ ಇದನ್ನು ಬಳಕೆ ಮಾಡುವುದರಿಂದ ರಾಸಾಯನಿಕ ಯೂರಿಯಾದಷ್ಟೆ ಪರಿಣಾಮಕಾರಿ ಫಲಿತಾಂಶ ಸಾಧ್ಯ.

ನಿಸರ್ಗದತ್ತ ಹಲ್ಲಿನ ಪುಡಿ ತಯಾರಿಕೆ

ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಪಿಚ್ಚ ಗುಂಟ್ಲ ಹಳ್ಳಿಯ ಬಿ. ಪ್ರಭಾಕರರವರು ತಯಾರಿಸಿರುವ "ಹಲ್ಲಿನ ಪುಡಿ"ಯು ನಮ್ಮ ನಿಸರ್ಗದತ್ತ ಸಂಪನ್ಮೂಲಗಳನ್ನು ಹೇಗೆಲ್ಲಾ ಬಳಸಬಹುದು ಎಂಬುದಕ್ಕೆ ಒಂದು ಉದಾಹರಣೆ. ಸ್ಥಳೀಯವಾಗಿ ದೊರೆಯುವ ವಸ್ತುಗಳಿಂದ ಖರ್ಚಿಲ್ಲದೆ ತಯಾರಿಸಬಹುದಾದ ಈ ಹಲ್ಲಿನ ಪುಡಿ ಮಾರುಕಟ್ಟೆಯಲ್ಲಿ ಲಭ್ಯವಿರುವ ಯಾವುದೇ ಹಲ್ಲಿನ ಪುಡಿ ಅಥವಾ ಪೇಸ್ಟ್‌ನಷ್ಟೇ ಪರಿಣಾಮಕಾರಿ. ಇದರಿಂದ ಹಲ್ಲಿನ ಮೇಲೆ ಇರುವ ಹಳದಿ ಕಲೆ ಮಾಯವಾಗುತ್ತದೆ ಹಾಗೂ ವಸಡು ಹೆಚ್ಚು ಬಲಿಷ್ಠವಾಗುತ್ತದೆ.

1 ಕೆ.ಜಿ. ಇದ್ದಿಲು, 1 ಕೆ.ಜಿ. ಉಪ್ಪು, 200 ಗ್ರಾಂ ಸುಣ್ಣದ ಪುಡಿ, 300 ಗ್ರಾಂ ಗರಗದ ಸೊಪ್ಪು *(Ficus cunia, Hain)*, 300 ಗ್ರಾಂ ಬೇವಿನ ಸೊಪ್ಪು, 200 ಗ್ರಾಂ ತುಳಸಿ ಮತ್ತು 200 ಗ್ರಾಂ ಲವಂಗಗಳನ್ನು ಪ್ರತ್ಯೇಕವಾಗಿ ಕುಟ್ಟಿ ಪುಡಿಮಾಡಿ ಈ ಪುಡಿಗಳನ್ನು ಜರಡಿಯ ನೆರವಿನಿಂದ ಶೋಧಿಸಿ ಮಿಶ್ರ ಮಾಡಿ ನುಣ್ಣನೆಯ ಪುಡಿಯನ್ನು ಸಂಗ್ರಹಿಸಿಕೊಳ್ಳಿ. ಇದನ್ನು ಡಬ್ಬವೊಂದರಲ್ಲಿ ಎತ್ತಿಟ್ಟುಕೊಂಡು ಪ್ರತಿದಿನ ಬಳಸಬಹುದು.

ಸಂಗ್ರಹ: ಜಿ. ಕೃಷ್ಣಪ್ರಸಾದ್, ಗ್ರೀನ್ ಪ್ರತಿಷ್ಠಾನ

ಗೆದ್ದಲಿಗೆ ಮೆಂತ್ಯ ಮದ್ದು

ಗೆದ್ದಲು ಹುಳುಗಳು ಸರ್ವವ್ಯಾಪಿ. ಇವುಗಳಿಂದ ಮರದ ಸಾಮಗ್ರಿಗಳನ್ನು ರಕ್ಷಿಸುವುದು ಕಷ್ಟದ ಕೆಲಸ. ಹಲವು ಬಗೆಯ ರಾಸಾಯನಿಕಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದರೂ ಅವು ದುಬಾರಿ ಅಲ್ಲದೆ ವಿಷಕಾರಿ. ಇದನ್ನು ಮನಗಂಡ ಶಿವಮೊಗ್ಗ ಜಿಲ್ಲೆ ಸಾಗರದ ಅರವಿಂದ ಕಾಯ್ಕಿಣಿ ಅವರು ಇದಕ್ಕೊಂದು ಪರಿಸರ ಸ್ನೇಹಿ ಉಪಾಯವನ್ನು ಕಂಡು ಕೊಂಡಿದ್ದಾರೆ. ಮೆಂತ್ಯೆ ಬೀಜಗಳನ್ನು ನೀರು ಹಾಕಿ ರುಬ್ಬಿ ಮುಲಾಮಿನಂತೆ ತೆಳು ಹಿಟ್ಟು ಮಾಡಿಕೊಂಡು ಮರದ ಸಾಮಗ್ರಿಗಳಿಗೆ ಲೇಪಿಸುತ್ತಾರೆ. ಇದರಿಂದ ಗೆದ್ದಲು ಮರದ ಸಾಮಗ್ರಿಗಳ ಸಮೀಪ ಸುಳಿಯುವುದಿಲ್ಲ. ಇದು ಧೀರ್ಘಾವಧಿ ಪರಿಣಾಮ ನೀಡುತ್ತದೆ. ಈ ಮೆಂತ್ಯೆ ಮದ್ದು ರಾಸಾಯನಿಕಗಳಿಗಿಂತ ಹೆಚ್ಚು ಪರಿಣಾಮಕಾರಿ.

ಕೆಂಪಿರುವೆ ಹಿಡಿಯಲು ಸರಳ ವಿಧಾನ



ಕೆಂಪಿರುವೆ, ಕೆಂಜಿರುವೆ, ಕೆಂಜುವ, ಚಿಗಳಿ ಎಂದೆಲ್ಲಾ ಕರೆಯಲ್ಪಡುವ ಈ ಇರುವೆ ಇರುವ ಮರವನ್ನು ಏರಿಳಿಯುವುದು ಬಲು ಕಷ್ಟ, ಇವುಗಳು ಕಚ್ಚುವುದರಿಂದ ಯಾವುದೇ ಪ್ರಾಣಾಪಾಯ ಇಲ್ಲದಿದ್ದರೂ ಅದರ ಹಿಂಸೆ ತಡೆಯಲಾಗದು. ಆದರೆ ಉತ್ತರ ಕನ್ನಡ ಜಿಲ್ಲೆಯ ಬೀರಣ್ಣನಾಯಕ ಮೊಗಟ ಅವರು ಈ ಇರುವೆಗಳನ್ನು ಹಿಡಿಯಲು ಒಂದು ಸರಳ ವಿಧಾನವನ್ನು ಅಳವಡಿಸಿಕೊಂಡಿದ್ದಾರೆ. ಅದೆಂದರೆ, ಕನ್ನಡದಲ್ಲಿ ಬಳಚು, ಚಪ್ಪೇ ಕಲ್ಲು ಎಂದೂ ಕೊಂಕಣಿಯಲ್ಲಿ ತಿಸರೆ ಎಂದೂ ಕರೆಯಲ್ಪಡುವ, ಕರ್ನಾಟಕ, ಗೋವಾ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ಕರಾವಳಿ ಜನ ಆಹಾರ ಪದಾರ್ಥವಾದ ಚಿಪ್ಪನ್ನು ಉಪಯೋಗಿಸಿದ ನಂತರ ಒಂದು ದೊಡ್ಡದಾದ ಪಾತ್ರೆಯಲ್ಲಿ ಹರಡಿ ಕೆಂಪಿರುವೆ ಇರುವ ಮರದ ಬುಡದಲ್ಲಿ ಇಡಬೇಕು. ಕೆಲವೇ ತಾಸುಗಳಲ್ಲಿ ಕೆಂಪಿರುವೆಯ ತಂಡ ಈ ಹರಡಿದ ಚಿಪ್ಪೆಯ ಪಾತ್ರೆಗೆ ಬಂದು ಚಿಪ್ಪೆಯಲ್ಲಿರುವ ನೀರು ಹಾಗೂ ಅಳಿದುಳಿದ ಮಾಂಸವನ್ನು ತಿನ್ನಲು ಪ್ರಾರಂಭಿಸುತ್ತವೆ. ಹೀಗೆ ಒಂದೆಡೆ ಸಂಗ್ರಹವಾದ ಇರುವೆಗಳನ್ನು ಪಾತ್ರೆ ಸಮೇತ ಚೀಲದಲ್ಲಿ ತುಂಬಿ ಬೇರೆಡೆಗೆ ಸಾಗಿಸಬಹುದು (ತಾವು ವಿಪರೀತ ಪ್ರಾಣಿದಯಾಳುಗಳಾಗಿದ್ದರೆ) ಅಥವಾ ಸುಡಬಹುದು. ಅವುಗಳನ್ನು ಸುಟ್ಟ ನಂತರ ಅದೇ ಚಿಪ್ಪನ್ನು ಕೆಂಪಿರುವೆ ಇರುವ ಬೇರೆ ಮರದ ಬುಡದಲ್ಲಿ ಇಟ್ಟು ಮರು ಬಳಕೆ ಮಾಡಬಹುದು. ಹೀಗೆ ಹಲವು ಸಲ ಬಳಸಿ ಕೆಂಪಿರುವೆ ಇಲ್ಲದಂತೆ ಮಾಡಬಹುದು.

ಸೀಮೆ ಎಣ್ಣೆ ಎಂಜಿನ್‌ನ ಸುಲಭ ಆರಂಭಕೊಂದು ಉಪಾಯ



ಸೀಮೆ ಎಣ್ಣೆ ಚಾಲಿತ ವಿಲ್ಲಿಯರ್ಸ್ ಇಂಜಿನನ್ನು ಚಾಲೂ ಮಾಡಲು ಹಗ್ಗ ಸುತ್ತಿ ಎಳೆಯುವುದು ವಾಡಿಕೆ. ಇದು ತುಂಬಾ ಪ್ರಯಾಸದ ಕೆಲಸ. ಹತ್ತಾರು ಬಾರಿ ಎಳೆಯ ಬೇಕಾಗಿ ಬಂದರೆ ಸೊಂಟ ನೋವು ಖಚಿತ. ಅದರಲ್ಲೂ ಚಳಿಗಾಲದಲ್ಲಿ ಇದನ್ನು ಚಾಲೂ ಮಾಡುವುದೊಂದು ಶಾಪ. ಈ ಕಷ್ಟತಪ್ಪಿಸಲು ಸವಣೂರಿನ ಪಿ.ಎಸ್. ಕೃಷ್ಣಭಟ್ ರವರು ಸನ್ನೆ ಸಾಧನವೊಂದನ್ನು ರೂಪಿಸಿದ್ದಾರೆ. ಏಳು ಅಡಿ ಉದ್ದದ ಎರಡು ಮರದ ಕಂಬಗಳನ್ನು ಅರ್ಧ ಅಡಿ ಅಂತರವಿರುವಂತೆ ಇಂಜಿನ್‌ನಿಂದ ಎರಡು ಅಡಿ ದೂರದಲ್ಲಿ ಹುಗಿದಿದ್ದಾರೆ. ಚಿತ್ರದಲ್ಲಿ ತೋರಿಸಿರುವಂತೆ ಹಿಡಿಯೊಂದನ್ನು ಜೋಡಿಸಿದ್ದಾರೆ. ಚಾಲನಾ ಹಗ್ಗವನ್ನು ಚಕ್ರಕ್ಕೆ ಸುತ್ತಿ ರಾಟೆ ಮೂಲಕ ಹಿಡಿಗೆ ಸಿಕ್ಕಿಸಿದ್ದಾರೆ. ಹಿಡಿಯನ್ನು ಕೆಳಕ್ಕೆಳೆದರೆ ಅಥವಾ ಒತ್ತಿದರೆ ಚಕ್ರ ತಿರುಗುತ್ತದೆ. ಇಂಜಿನ್ ಚಾಲೂ ಆಗುತ್ತದೆ. ಇದಕ್ಕೆ ಸೊಂಟ ಬಗ್ಗಿಸಬೇಕಿಲ್ಲ, ಹಗ್ಗ ಕೈಕೊರೆಯುವುದಿಲ್ಲ. ಈ ವ್ಯವಸ್ಥೆಗೆ ಅವರಿಗಾದ ಖರ್ಚು ಕೇವಲ 100 ರೂಪಾಯಿಗಳು. ಆದ್ದರಿಂದ ಈ ಇಂಜಿನ್ ಹೊಂದಿರುವ ಎಲ್ಲಾ ರೈತರೂ ಈ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬಹುದು.


ಸಂಗ್ರಹ: ಸುದರ್ಶನ, ಅಡಿಕೆ ಪತ್ರಿಕೆ

(ಈ ಎಲ್ಲಾ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಪ್ರಶಸ್ತಿಯ ಆಯ್ಕೆಗೆ ಕಳುಹಿಸಲಾಗಿದೆ)

ರೇಷ್ಮೆ ಕೃಷಿಗೆ ಸುಧಾರಿತ ಟ್ರೇ ಮತ್ತು ಚಂದ್ರಿಕೆಗಳು

ವಿದೇಶಿ ರೇಷ್ಮೆಯ ಆಮದಿನಿಂದಾಗಿ ಇಂದು ನಮ್ಮ ದೇಶದ ರೇಷ್ಮೆ ಕೃಷಿಗೆ ಒದಗಿರುವ ಕಠಿಣ ಪರಿಸ್ಥಿತಿಯಲ್ಲಿ ಗೂಡುಗಳ ಇಳುವರಿಯನ್ನು ಹೆಚ್ಚಿಸುವ ಜೊತೆಗೆ ಖರ್ಚನ್ನು ಕಡಿಮೆ ಮಾಡುವ ಸಾಧನ-ವಿಧಾನಗಳ ಅವಶ್ಯಕತೆಯು ಅನಿವಾರ್ಯವಾಗಿದೆ ಎನ್ನುತ್ತಾರೆ ಗದಗ ಜಿಲ್ಲೆ ಶಿರಹಟ್ಟಿಯ ನಿವೃತ್ತ ಶಿಕ್ಷಕ ಹಾಗೂ ಕೃಷಿಕ ಶಂಕ್ರಪ್ಪ ಎಮ್. ಮಂಗಳಿ. ಅದಕ್ಕಾಗಿ ಇವರು ಸುಧಾರಿತ ಟ್ರೇ ಮತ್ತು ಚಂದ್ರಿಕೆಗಳನ್ನು ಅಭಿವೃದ್ಧಿ ಪಡಿಸಿದ್ದಾರೆ.

ಅ) ತಟ್ಟೆ: ಕಡಿಮೆ ಖರ್ಚು ಹಾಗೂ ಕಡಿಮೆ ತೂಕದ ಈ ಟ್ರೇಗಳನ್ನು ಬಳಸಲು ಹೆಚ್ಚು ಶ್ರಮದ ಅವಶ್ಯಕತೆ ಇಲ್ಲ. ರೆಂಬೆ ಮಾದರಿಯ ಸ್ಟ್ಯಾಂಡುಗಳಲ್ಲಿ ಈ ಟ್ರೇಗಳನ್ನು ಉಪಯೋಗಿಸುವುದರಿಂದ ರ್‍ಯಾಕುಗಳ ನಡುವಿನ ಅಂತರವನ್ನು 10-12 ಇಂಚುಗಳಿಗೆ ಇಟ್ಟು ಹುಳು ಸಾಕುವ ಮನೆಯ ಸಾಮರ್ಥ್ಯವನ್ನು ದ್ವಿಗುಣಗೊಳಿಸಿ ಮನೆಯ ಖರ್ಚನ್ನು ಉಳಿಸಬಹುದು.



ಆ) ಚಂದ್ರಿಕೆಗಳು: ಮರದ ರಿಪೀಸು ಪಟ್ಟಿ, ಕಬ್ಬಿಣದ ಪಟ್ಟಿ ಅಥವಾ ಪ್ಲಾಸ್ಟಿಕ್ ದಾರಗಳಿಂದ ತಯಾರಿಸಿರುವ ಈ ಸುಧಾರಿತ ಚಂದ್ರಿಕೆಗಳ ವಿಸ್ತೀರ್ಣ ಅಥವಾ ಗಾತ್ರ ಕೇವಲ 8 ಚದರ ಅಡಿ (4X2). ಆದ್ದರಿಂದ ಇವುಗಳನ್ನು ಇಡಲು ಹೆಚ್ಚು ಸ್ಥಳ ಬೇಕಿಲ್ಲ. 160 ಘನ ಅಡಿಗಳಷ್ಟು ಸ್ಥಳದಲ್ಲಿ 18ರ ನಾಲ್ಕು ಗುಂಪುಗಳಲ್ಲಿ 5 ಅಡಿ ಎತ್ತರಕ್ಕೆ ಒಟ್ಟು 72 ಚಂದ್ರಿಕೆಗಳನ್ನು ಇಡಬಹುದು. ಅತೀ ಕಡಿಮೆ ತೂಕದ ಈ ಚಂದ್ರಿಕೆಗಳನ್ನು ಒಬ್ಬರೇ ಹೆಚ್ಚು ಶ್ರಮವಿಲ್ಲದೆ ಸುಲಭವಾಗಿ ಉಪಯೋಗಿಸಿ ಆಳಿನ ಖರ್ಚು ಉಳಿಸಬಹುದು. ಸ್ವಚ್ಛ ಮಾಡುವುದು ಹಾಗೂ ಸೋಂಕು ನಿವಾರಣೆ ಮಾಡುವುದು ಸುಲಭ. 8 ಚದರ ಅಡಿಯ ಒಂದು ಚಂದ್ರಿಕೆಯಲ್ಲಿ ಒಂದು ಚದರ ಅಡಿಗೆ 132 ಗೂಡುಗಳಂತೆ ಒಟ್ಟು 1056 ಗೂಡುಗಳನ್ನು ಕಟ್ಟಲು ಬರುತ್ತದೆ. ಈ ಚಂದ್ರಿಕೆಗಳ ವಿಶಿಷ್ಟ ರಚನೆಯಿಂದಾಗಿ ಗೂಡು ಕಟ್ಟುವ ಹುಳುಗಳಿಗೆ ಪಕ್ಕದಲ್ಲಿಯೇ ಪಟ್ಟಿ ಅಥವಾ ದಾರ ಸಿಗುವುದರಿಂದ ಗೂಡು ಕಟ್ಟುವಿಕೆ ಬೇಗನೆ ಪ್ರಾರಂಭವಾಗುತ್ತದೆ. ಅಲ್ಲದೆ ರೇಷ್ಮೆಯು ವ್ಯರ್ಥವಾಗುವುದು ತಪ್ಪುತ್ತದೆ. ಗೂಡು ಕಟ್ಟಿದಾಗಲೂ ಚಂದ್ರಿಕೆಗಳನ್ನು ಒಂದರ ಮೇಲೊಂದು ಇಡಬಹುದು. ಚಂದ್ರಿಕೆಗಳ ನಡುವೆ ಖಾಲಿ ಜಾಗ ಇರುವುದರಿಂದ ಗೂಡುಗಳು ಕೆಡುವುದಿಲ್ಲ. ಇವುಗಳ ಬೆಲೆಯು ಬಿದಿರಿನ ಚಂದ್ರಿಕೆಗಳ ಬೆಲೆಯ ಅರ್ಧಕ್ಕಿಂತಲೂ ಕಡಿಮೆ.

ಮೂಲ: ಎಸ್.ಎಂ. ಮಂಗಳ, ಶಿರಪಟ್ಟಿ, ಗದಗ (ಜಿ)

ಟ್ರ್ಯಾಕ್ಟರ್ ಸ್ವಯಂ ಚಾಲಿತ ಬಿತ್ತುವ ಕೂರಿಗೆ

ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕು ಶಲವಡಿಯ ಶ್ರೀ ನಾಗಲಿಂಗಪ್ಪ ಮಾನಪ್ಪ ಬಡಿಗೇರ ಅವರು ತಮ್ಮ ನಿರಂತರ ಹುಡುಕಾಟ ಮತ್ತು ಪರಿಶ್ರಮದಿಂದಾಗಿ ಟ್ರ್ಯಾಕ್ಟರ್ ಸ್ವಯಂ ಚಾಲಿತ ಬಿತ್ತುವ ಕೂರಿಗೆಯನ್ನು



ಅಭಿವೃದ್ಧಿಪಡಿಸಿದ್ದಾರೆ. ಈ ಕೂರಿಗೆಯನ್ನು ಬಳಸುವುದರಿಂದ ಸಮಯದ ಉಳಿತಾಯ ಸಾಧ್ಯ. ಹೆಚ್ಚುವರಿ ಆಳುಗಳ ಅವಶ್ಯಕತೆಯಿಲ್ಲ. ಒಂದೇ ದಿವಸದಲ್ಲಿ ಸುಮಾರು 25 ರಿಂದ 35 ಎಕರೆ ಭೂಮಿಯನ್ನು ಬಿತ್ತಬಹುದಾಗಿದೆ. ಗೋದಿ, ಜೋಳ, ಕಡಲೆ, ಹತ್ತಿ, ಸೂರ್ಯಕಾಂತಿ, ಮೆಣಸಿನಕಾಯಿ, ಶೇಂಗಾ ಮುಂತಾದ ಬೀಜಗಳನ್ನು ಬಿತ್ತಲು ಯೋಗ್ಯ. ಈ ಬೀಜಗಳ ಜೊತೆಗೆ ಮಿಶ್ರ ಬೆಳೆಯಾಗಿ ಈರುಳ್ಳಿಯಲ್ಲಿ ಮೆಣಸಿನಕಾಯಿ, ಜೋಳದಲ್ಲಿ ಕಡಲೆ ಅಥವಾ ಅಗಸಿ, ಗೋದಿಯಲ್ಲಿ ಕುಸುಬೆ, ಕಡಲೆಯಲ್ಲಿ ಕುಸುಬೆ, ಸೂರ್ಯಕಾಂತಿಯಲ್ಲಿ ತೊಗರಿ ಮುಂತಾದವುಗಳನ್ನು ನಿರ್ದಿಷ್ಟ ಪ್ರಮಾಣದ ಅಂತರದಲ್ಲಿ ಬಿತ್ತಬಹುದಾಗಿದೆ. ಈ ಕೂರಿಗೆಯು ರೈತರಿಗೆಲ್ಲಾ ಅದರಲ್ಲೂ ದೊಡ್ಡ ರೈತರಿಗೆ ವರದಾನವಾಗಿದೆ. ಇದರ ಮಹತ್ವ ತಿಳಿದ ಅನೇಕ ಜಿಲ್ಲೆಗಳ ರೈತರು ಇದನ್ನು ತಮ್ಮ ಉಪಯೋಗಕ್ಕೆ ತೆಗೆದುಕೊಂಡು ಹೋಗಿದ್ದಾರೆ.

ಮೂಲ: ಎನ್. ಎಂ. ಬಡಿಗೇರ, ಶಲವಡಿ, ನವಲಗುಂದ (ತಾ), ಧಾರವಾಡ (ಜಿ)

ಗೇರು ಬೀಜದ ಕತ್ತರಿ

ಗೇರು ಅಥವಾ ಗೋಡಂಬಿ ಬೀಜ ಬಲು ನುಣುಪು. ಕೈಯಲ್ಲಿ ಹಿಡಿದರೆ ಜಾರುವುದರಿಂದ ಕತ್ತಿ, ಚೂರಿಗಳನ್ನು ಬಳಸಿ ಒಣಗಿದ ಬೀಜವನ್ನು ತುಂಡರಿಸಿ ಒಳಗಿನ ತಿರುಳು ಬೀಜವನ್ನು (ಬೊಂಡು) ತೆಗೆಯುವುದು ಬಹಳ ಕಷ್ಟದ ಕೆಲಸ. ಅದಕ್ಕಾಗಿ ಬೆಳ್ತಂಗಡಿ ತಾಲ್ಲೂಕು ಉರುವಾಲುವಿನ ತಿಲಕ್. ಉರುವಾಲು ಅವರು ಹೊಸದೊಂದು ಸಾಧನ ರೂಪಿಸಿದ್ದಾರೆ. ಇದರಲ್ಲಿ ಬೀಜಗಳನ್ನು ಇಡಲು 'V' ಆಕಾರದ ಪೀಠವಿದ್ದು ಪೀಠದ ಮೇಲಕ್ಕೆ ಅಳವಡಿಸಿರುವ ಅಡ್ಡಗತ್ತರಿಯಂತಹ ಸನ್ನೆಗತ್ತರಿಯನ್ನು ಹಿಡಿದು ಒತ್ತಿದರೆ ಬೀಜ ಸುಲಭವಾಗಿ



ಎರಡು ಪಾಲಾಗುತ್ತದೆ. ಇದು ಹಸಿ ಬೀಜಗಳನ್ನು ಕತ್ತರಿಸಲೂ ಕೂಡ ಯೋಗ್ಯವಾಗಿದ್ದು ಇದಕ್ಕೆ ಅವರಿಗಾದ ಖರ್ಚು ಕೇವಲ ಐವತ್ತು ರೂಪಾಯಿಗಳು. ಈ ಮಾದರಿಯನ್ನು ಅನುಸರಿಸಿ ಬೀಜ ಕತ್ತರಿಸುವ ಸಾಧನವನ್ನು ತಯಾರಿಸಿ ಇತ್ತೀಚೆಗೆ ಕೆಲವರು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದಾರೆ.

ಸಂಗ್ರಹ: ಸುದರ್ಶನ, ಅಡಿಕೆ ಪತ್ರಿಕೆ

(ಈ ಎಲ್ಲಾ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಪ್ರಶಸ್ತಿಯ ಆಯ್ಕೆಗೆ ಕಳುಹಿಸಲಾಗಿದೆ)

ಚಿಕ್ಕ ವೀರಪ್ಪನವರ ಪಶು ಚಿಕಿತ್ಸಾ ವಿಧಾನಗಳು

ದುಂಬೆ ರೋಗಕ್ಕೆ ಮದ್ದು

ದನಗಳಿಗೆ ಮುಖ, ದೇಹ, ಕಿವಿಗಳಲ್ಲಿ ಊತ ಕಾಣಿಸಿಕೊಂಡು ದೇಹ ಅಲರ್ಜಿಯಾದರೆ ಅದನ್ನು 'ದುಂಬೆ ರೋಗ' ಎನ್ನುತ್ತಾರೆ. ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಬೆಟ್ಟದ ಮಲ್ಲೇನ ಹಳ್ಳಿಯ ಚಿಕ್ಕ ವೀರಪ್ಪನವರು ಇದಕ್ಕೆ ಸುಲಭದ ಮದ್ದೊಂದನ್ನು ತಿಳಿಸುತ್ತಾರೆ. ಅದೇನೆಂದರೆ ನಾಯಿ ತುಳಸಿ (*Ocimum basilicum*), ಉತ್ತರಾಣಿ ಸೊಪ್ಪು (*Achyranthes aspera*), ಬೇವಿನ ಸೊಪ್ಪು, ಬಿದಿರು ಸೊಪ್ಪು ಮತ್ತು ಗುಪ್ಪಟ್ಟೆ ಸೊಪ್ಪು (*Physalis minima*)ಗಳನ್ನು ತಿನ್ನಿಸುವುದು. *(ದನಗಳ ಅಲರ್ಜಿಗೆ ನಾಯಿ ತುಳಸಿ, ಉತ್ತರಾಣಿ ಸೊಪ್ಪು, ಬೇವಿನ ಸೊಪ್ಪು ಇವುಗಳು ಪರಿಣಾಮಕಾರಿ ಎಂದು ಪಶುವೈದ್ಯರು ಒಪ್ಪುತ್ತಾರೆ. ಆದರೆ ಬಿದಿರು ಸೊಪ್ಪು ಮತ್ತು ಗುಪ್ಪಟ್ಟೆ ಸೊಪ್ಪುಗಳ ಬಳಕೆಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ).*

ಸ್ಯಾದರಿ ರೋಗಕ್ಕೆ ಸ್ಯಾದರಿ ಸೊಪ್ಪು

ಸ್ಯಾದರಿ ಎಂದು ಕರೆಯಲ್ಪಡುವ ಈ ರೋಗದ ಲಕ್ಷಣವೆಂದರೆ ಅತಿಯಾಗಿ ಸೀನುವುದು. ಸ್ಯಾದರಿ ಸೊಪ್ಪನ್ನು ತಿನ್ನಿಸುವುದರಿಂದ ಅಥವಾ ದಾಸಗುಳ್ಳಕಾಯಿ (*Solanum leavae*) ಯನ್ನು ಆಡಿನ ಹಾಲಿನಲ್ಲಿ ಕಲಸಿ ಮೂಗಿಗೆ ಹಾಕುವುದರಿಂದ ಈ ಖಾಯಿಲೆಯನ್ನು ಗುಣಪಡಿಸಬಹುದು ಎಂಬುದು ಮಂಡ್ಯ ಜಿಲ್ಲೆಯ ರೈತರ ಅನುಭವ.

ಕುರಿಗಳಲ್ಲಿ ಮೈ ಊತ



ಕುರಿಗಳ ದೇಹದಲ್ಲಿ ಊತ ಕಂಡು ಬಂದಲ್ಲಿ 'ಕೊಟ್ಟೆ' (ಗೊಟ್ಟ)ತಾ ಎನ್ನುತ್ತಾರೆ ಚಿಕ್ಕ ವೀರಪ್ಪನವರು. ಕೊಟ್ಟ ಎಂದರೆ ಸಾಕು ಪ್ರಾಣಿಗಳಿಗೆ ಗಂಜಿ ಮುಂತಾದ ಆಹಾರ ಕುಡಿಸಲು ಬಳಸುವ ಬಿದಿರಿನ ಸಾಧನ. ಆವರಿಕೆ (*Cassia auriculata*) ಸೊಪ್ಪನ್ನು ಮಜ್ಜಿಗೆಯಲ್ಲಿ ಅರೆದು 2 ಕೊಟ್ಟಗಳಷ್ಟು (1 ಕೊಟ್ಟ=0.25 ಲೀ) ಕಷಾಯವನ್ನು ಕುರಿಗೆ ಕುಡಿಸಿದರೆ ಊತ ಇಳಿಯುತ್ತದೆ ಎಂಬುದು ಚಿಕ್ಕ ವೀರಪ್ಪನವರು ಕಂಡು ಕೊಂಡ ಸತ್ಯ. ಜೊತೆಗೆ ಈ ಕಷಾಯವನ್ನು ದೇಹಕ್ಕೂ ಸವರುವುದುಂಟು *(ಆವರಿಕೆ ಸೊಪ್ಪಿಗೆ ಊತನಿವಾರಕ ಮತ್ತು ನೋವು ನಿವಾರಕ ಗುಣವಿದೆ ಎಂಬುದು ವೈಜ್ಞಾನಿಕವಾಗಿ ತಿಳಿದಿರುವ ವಿಚಾರ).*

ಹಾವು / ಹುಳುಗಳು ಕಚ್ಚಿದರೆ

ದನ, ಎಮ್ಮೆ, ಕುರಿ, ಮೇಕೆ ಮುಂತಾದ ಪ್ರಾಣಿಗಳು ಮೇಯಲು ಬಿಟ್ಟ ಜಾಗದಲ್ಲಿ ಹಾವು, ಹುಳು-ಹುಪ್ಪಟಗಳಿಂದ ಕಚ್ಚಲ್ಪಟ್ಟರೆ ಆ ಭಾಗ ಊದಿಕೊಂಡಿರುತ್ತದೆ. ಆಗ ಆ ಭಾಗಕ್ಕೆ ಉಪ್ಪಾಚಿ (*Azima tetracantha*) ಮುಳ್ಳಿನಿಂದ ಬಡಿದರೆ ಊತ ಇಳಿಯುತ್ತದೆಯಂತೆ *(ಇದನ್ನು ವೈಜ್ಞಾನಿಕವಾಗಿ ದೃಢಪಡಿಸಿದಲ್ಲಿ ಅದ್ಭುತ ಅನ್ವೇಷಣೆಯಾಗಲಿದೆ).*

ಮೂಲ: ಚಿಕ್ಕವೀರಪ್ಪ, ಬೆಟ್ಟದ ಮಲ್ಲೇನಹಳ್ಳಿ, ನಾಗಮಂಗಲ, ಮಂಡ್ಯ (ಜ)

ಸಂಗ್ರಹ: ಮು.ಲ. ಕೆಂಪೇಗೌಡ ನಾಗಮಂಗಲ

(ವೈಜ್ಞಾನಿಕ ವಿಶ್ಲೇಷಣೆ: ಡಾ. ಎನ್.ಬಿ.ಶ್ರೀಧರ, ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಬೆಂಗಳೂರು)

ಗಾಯಿತ್ರಿ ಸುಬ್ಬರಾವ್‌ರವರ ಪಶುಚಿಕಿತ್ಸಾ ಅನುಸರಣೆಗಳು

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕು ಶಿರೂಮನೆಯ ಶ್ರೀಮತಿ ಎಸ್. ಗಾಯಿತ್ರಿ ಸುಬ್ಬರಾವ್‌ರವರು ಒದಗಿಸಿರುವ ಕೆಲವು ಪಶುಚಿಕಿತ್ಸಾ ಔಷಧಿಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ. ಈ ಔಷಧಿಗಳನ್ನು ಮನೆಗಳಲ್ಲಿಯೇ ಸ್ವಂತವಾಗಿ ಮಾಡಬಹುದಾಗಿದ್ದು ಇವು ಅತ್ಯಂತ ಉಪಯುಕ್ತ.

ಬಂಜೆ ಜಾನುವಾರುಗಳ ಗರ್ಭಧಾರಣೆ

- ★ ಉದ್ದಿನ ಕಾಳನ್ನು ಮೊಳಕೆ ಬರಿಸಿ ಮೂರು ದಿನ ಬೆಳಿಗ್ಗೆ ತಿನ್ನಿಸುವುದು.
- ★ ದಾಸವಾಳದ ಹೂವು ಅಥವಾ ಎಲೆಯನ್ನು ಜಜ್ಜಿ ಅನ್ನದ ಗಂಜಿ ಜೊತೆಗೆ ಬೆರೆಸಿ ತಾಮ್ರದ ಪಾತ್ರೆಯಲ್ಲಿ ಸ್ವಲ್ಪ ಹೊತ್ತು ನೆನೆಯಲು ಬಿಟ್ಟು ನಂತರ ಜಾನುವಾರಿಗೆ ಕೊಡಬೇಕು.
- ★ ಮಾವಿನ ಮರದ ಅಥವಾ ಕೌಲೇ ಮರದ ಸೊಪ್ಪನ್ನು ಸಣ್ಣಗೆ ಹಚ್ಚಿ ಅಕ್ಕಿ ಗಂಜಿ ಜೊತೆ ಬೇಯಿಸಿ. ಈ ಗಂಜಿಯನ್ನು ಕರು ಹಾಕದ ಬಂಜೆ ಜಾನುವಾರುಗಳಿಗೆ ಮೂರು ಬಾರಿ (ಮೂರ್ನಾಲ್ಕು ದಿನಗಳ ಅಂತರದಲ್ಲಿ) ಕುಡಿಸಬೇಕು.

ಮಾಸು (ಸತ್ತೆ) ಬೀಳದಿದ್ದರೆ

ಒಮ್ಮೊಮ್ಮೆ ಜಾನುವಾರುಗಳು ಕರು ಹಾಕಿದ ನಂತರ ಮಾಸು ಬೀಳುವುದಿಲ್ಲ ಅಥವಾ ತಡವಾಗುತ್ತದೆ. ಅಂತಹ ಸಂಧರ್ಭಗಳಿಗಾಗಿ ಇಲ್ಲಿವೆ ಕೆಲವು ಮದ್ದುಗಳು.

- ★ ತೊಗರಿ ಬೇಳೆಗೆ ಸ್ವಲ್ಪ ಶೇಂಗಾ ಎಣ್ಣೆ ಸೇರಿಸಿ ಮಾಸು ಬೀಳದ ಜಾನುವಾರಿಗೆ ಕುಡಿಸಿ.
- ★ ಭತ್ತದ ಜೊತೆ ಬಿದಿರು ಸೊಪ್ಪು ಬೆರೆಸಿ ತಿನ್ನಿಸಿ.
- ★ ಒಂದು ಮುಷ್ಠಿ ಬಿಳಿ ಬಿಲಗುಂಜಿ ಬೀಜ ಅಥವಾ ಇದರ ಎಲೆಯನ್ನು ಜಜ್ಜಿ ಬೆಲ್ಲದೊಂದಿಗೆ ಬೆರೆಸಿ ತಿನ್ನಿಸಿ.

ನೆನೆ ಬಂದರೆ

- ★ ಒಂದು ಪಾವು ಅಕ್ಕಿ ಮತ್ತು ಕಾಲು ಪಾವು ಮೆಂತ್ಯ ಕಾಳುಗಳನ್ನು ಅರ್ಧ ಗಂಟೆ ನೀರಿನಲ್ಲಿ ನೆನೆಸಿ, ಬೀಸಿ ಜಾನುವಾರಿಗೆ ಕೊಟ್ಟರೆ ನೆನೆ ಬರುವುದು ಕಡಿಮೆ ಆಗುತ್ತದೆ.
- ★ ಮುಟ್ಟಿದರ ಮುನಿ (ಮುಚ್ಚುಗ) ಸೊಪ್ಪನ್ನು ಜಜ್ಜಿ, ತೌಡಿನಲ್ಲಿ ಬೆರೆಸಿ ತಿನ್ನಲು ಕೊಟ್ಟರೆ ನೆನೆ ಬರುವುದು ಹೋಗುತ್ತದೆ.
- ★ ಪತ್ರೆ ಸೊಪ್ಪು, ಬೋಳು ಹೀರೆ ಸೊಪ್ಪು ಅಕ್ಕಿ ಜೊತೆ ಬೀಸಿ ತಿನ್ನಿಸಿದರೆ ನೆನೆ ಬರುವುದಿಲ್ಲ.
- ★ ನೆನೆ ಬಂದಾಗ ಒಳ್ಳೆಣ್ಣೆ ಸ್ವಲ್ಪ ಕುಡಿಸಿ ನೆನೆ ಬಂದ ಜಾಗಕ್ಕೆ ಸವರಿದರೆ ತಂಪಾಗಿ ಒಳಗೆ ಹೋಗುತ್ತದೆ.
- ★ ನೆನೆ ಬಂದಾಗ ಜಾನುವಾರುಗಳು ಮಲಗುವ ಹಿಂದುಗಡೆ ಜಾಗ ಸ್ವಲ್ಪ ಎತ್ತರ ಇರುವಂತೆ ವ್ಯವಸ್ಥೆ ಮಾಡಬೇಕು.

ನಂಜು ನಿವಾರಣೆಗೆ

ಜೀರಿಗೆ, ಕಾಳು ಮೆಣಸು, ಬಜೆ, ಒಣಶುಂಠಿ ಮತ್ತು ಗಜ್ಜುಗಗಳನ್ನು ನಯವಾಗಿ ಪುಡಿಮಾಡಿ ಅರಿಸಿಣ ಪುಡಿ ಮತ್ತು 4 ಚಮಚ ಪುಡಿ ಜೋನಿ (ನೀರು) ಬೆಲ್ಲದೊಂದಿಗೆ ಬೆರೆಸಿ ಕರು ಹಾಕಿದ ಜಾನುವಾರಿಗೆ ತಿನ್ನಿಸಿದರೆ ನಂಜು ನಿವಾರಣೆ ಆಗುತ್ತದೆ. ಇದನ್ನು 4 ದಿನಗಳಿಗೊಮ್ಮೆ 12 ದಿನಗಳವರೆಗೆ ಕೊಡಬೇಕು.

ಕೊಡಸಿಗೆ ಚಕ್ಕೆ *(Wrightia tinctoria)*, ಜೀರಿಗೆ, ಕಾಳು ಮೆಣಸುಗಳನ್ನು ಜಜ್ಜಿ ಕಷಾಯ ಮಾಡಿ ಬೆಳಿಗ್ಗೆ ಮುಂಚೆ ಐದು ದಿನ ಕೊಟ್ಟರೆ ನಂಜು ಆದ ಜಾನುವಾರಿಗೆ ತುಂಬ ಒಳ್ಳೆಯದು.

ಸಂಗ್ರಹ: ಸುದರ್ಶನ, ಅಡಿಕೆ ಪತ್ರಿಕೆ

(ಈ ಎಲ್ಲಾ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂರನೇ ಸುತ್ತಿನ ಪ್ರಶಸ್ತಿಯ ಆಯ್ಕೆಗೆ ಕಳುಹಿಸಲಾಗಿದೆ).

ಅಯ್ಯಪ್ಪ ಮಸಗಿ : ಬತ್ತಿದ ಬಾವಿಗಳ ಭಗೀರಥ

ರಾಜ್ಯ-ರಾಷ್ಟ್ರಾದ್ಯಂತ ಎಲ್ಲೆಲ್ಲೂ ಬರ, ಮಳೆ ಇಲ್ಲದೆ ಬೆಳೆ ಇಲ್ಲ. ಹಿಂದೆ ಎಂದೂ ಬತ್ತದ ಬಾವಿ, ಕೆರೆ ಮತ್ತು ಅಣೆಕಟ್ಟೆಗಳು ಈ ಬಾರಿ ಒಣಗಿವೆ. ಈ ಪ್ರಕೃತಿ ವಿಕೋಪದಿಂದಾಗಿ ರೈತ ಮತ್ತು ಜನತೆ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಈ ವಿಕೋಪವೇ ನಮಗಿಂದು ಒಂದು ಬಹು ದೊಡ್ಡ ಪಾಠ ಕಲಿಸಿದೆ. ನೀರಿನ ಮಹತ್ವದ ಅರಿವಾಗುತ್ತಿದೆ. ಈ ಸಂದರ್ಭದಲ್ಲಿ ಸರ್ಕಾರ ಮತ್ತು ಜನತೆ ಎಚ್ಚೆತ್ತುಕೊಂಡು ಸಮಸ್ಯೆಗೆ ಪರಿಹಾರ ಹುಡುಕಲು ಮುಂದಾಗುತ್ತಿದ್ದಾರೆ. ಈ ಸಮಸ್ಯೆಗೆ ಧೀರ್ಘಕಾಲಿಕ ಪರಿಹಾರವೆಂದರೆ ಅಂತರ್ಜಲ ಮರುಪೂರಣ. ಅದು ಹೇಗೆ? ಈ ಪ್ರಶ್ನೆಗಳಿಗೆ ಉತ್ತರ ಕೊಡುವ ಸಮರ್ಥರು ಇಲ್ಲಿದ್ದಾರೆ. ಅವರೇ, ಬತ್ತಿದ ಬಾವಿಗಳ ಭಗೀರಥ, ರೋಣ ತಾಲ್ಲೂಕು ವೀರಾಪುರದ ಅಯ್ಯಪ್ಪ ಮಸಗಿ. "ಬಯಲು ಸೀಮೆಯ ವಿಶ್ವೇಶ್ವರಯ್ಯ", "ಬಾಳೆಹಣ್ಣಿನ ಮಾವ", "ಬರದ ನಾಡಿನ ಭಗೀರಥ" ಇನ್ನೂ ಮುಂತಾಗಿ ಕರೆಸಿಕೊಂಡಿರುವ ಅಯ್ಯಪ್ಪ ಮಸಗಿಯವರಿಗೆ ನೀರು ಎಂದರೆ ಸರ್ವಸ್ವ. ಸರ್ವ ಕಷ್ಟ ನಿವಾರಕ "ನೀರು ಎಂದರೆ ನೀ ಇರು, ನೀ ಇರಬೇಕಾದರೆ ಇರಲಿ ನೀರು" ಎನ್ನುವ ಮಸಗಿಯವರದು ಬರೆ ಬಾಯುಪಚಾರವಲ್ಲ, ಹೇಳಿದುದನ್ನು ಮಾಡಿ ತೋರಿಸಿದ್ದಾರೆ.

ವೃತ್ತಿಯಲ್ಲಿ ಲಾರ್ಸನ್ ಮತ್ತು ಟೂಬ್ರೊ ಸಂಸ್ಥೆಯ ಉದ್ಯೋಗಿಯಾಗಿದ್ದ ಇವರು ವೃತ್ತಿಯ ಏಕತಾನತೆಗೆ ಬೇಸತ್ತು ಕೃಷಿಯ, ಅದರಲ್ಲೂ ಅಂತರ್ಜಲ ವೃದ್ಧಿಯ ಹುಚ್ಚಿಗೆ ಮರುಳಾಗಿ ಛಲ ತೊಟ್ಟು ಸ್ವಯಂ ನಿವೃತ್ತಿ ಪಡೆದು ಕೃಷಿ ಕಾಯಕಕ್ಕೆ ಕೈ ಹಾಕಿದರು. 1994ರಲ್ಲಿ ರೋಣ ತಾಲ್ಲೂಕು ಗಜೇಂದ್ರಗಡ ಬಳಿಯ ವೀರಾಪುರ ಗ್ರಾಮದಲ್ಲಿ ತೋಟ ಖರೀದಿಸಿದರು. ಬಯಲು ಸೀಮೆಯಲ್ಲೂ ಅಡಿಕೆ, ಕಾಫಿ, ಬಾಳೆ, ತೆಂಗು, ಲೀಚಿ ಮುಂತಾದವುಗಳನ್ನು ಬೆಳೆದು ಯಶಸ್ವಿಯಾಗಿ "ಬಾಳೆಹಣ್ಣಿನ ಮಾವ" ಎಂದು ಸ್ಥಳೀಯವಾಗಿ ಪರಿಚಿತರಾದರು.

ನಂತರದ್ದು ಯಶಸ್ಸಿನ ಗಾಥೆ. ಅಂತರ್ಜಲ ಅಭಿವೃದ್ಧಿಗಾಗಿ ಪಣ. ಅದಕ್ಕಾಗಿ ಹೊಸ ವಿಧಾನದ ಆವಿಷ್ಕಾರ. ಅದಕ್ಕೆ ಅಪಾರ ಜನಮನ್ನಣೆ. ಕೃಷಿ ಭೂಮಿಯ ಒಂದು ಅಂಚಿಗೆ 400 ಅಡಿ ಉದ್ದ, 40 ಅಡಿ ಅಗಲ ಮತ್ತು 6 ಅಡಿ ಆಳದ ಕೃಷಿ ಹೊಂಡ ನಿರ್ಮಾಣ. ಆ ಹೊಂಡಕ್ಕೆ (ಕೆರೆಗೆ) ಹರಿದು ಹೋಗುವ ಮಳೆ ನೀರನ್ನು ಹರಿಸಿ ನಿಲ್ಲಿಸಿದರು. ಆ ಹೊಂಡದ ಒಂದು ಮೂಲೆಯಲ್ಲಿ ಒಂದು ಸೋಸುಗುಂಡಿಯನ್ನು ತೋಡಬೇಕು. ಕಸ ಕಡ್ಡಿ ತಳಕ್ಕೆ ಇಳಿದಾದ ನಂತರ ಶೋಧಿಸಲ್ಪಟ್ಟ ನೀರು ಈ ಸೋಸು ಗುಂಡಿಯಲ್ಲಿ ನಿಲ್ಲುತ್ತದೆ. ಈ 400 ಅಡಿ ಉದ್ದದ ಕೃಷಿ ಹೊಂಡದಲ್ಲಿ ನಿಂತ ನೀರು ಇಂಗಲು ಪ್ರಾರಂಭಿಸಿ ನೆಲದ ನೀರಾಗುತ್ತದೆ. ಸೋಸು ಗುಂಡಿಯಲ್ಲಿ ಸಂಗ್ರಹವಾದ ನೀರನ್ನು ಆರು ಇಂಚಿನ ಪೈಪ್ ಮುಖಾಂತರ ಕೊಳವೆ ಬಾವಿಗೆ (ಕೇಸಿಂಗ್ ಪೈಪಿಗೆ ಆಳದಲ್ಲಿ ತೂತು ಕೊರೆದು) ಹರಿಸಬಹುದು. ಹೀಗೆ ನೀರು ಅಂತರ್ಜಲದ ಖಜಾನೆ ಸೇರುತ್ತದೆ. ಈ ವಿಧಾನದಿಂದ ಮಳೆ ಸುರಿಯುವಾಗ ಗಂಟೆಗೆ ಕನಿಷ್ಠ ಒಂದು ಲಕ್ಷ ಲೀಟರ್ ನೀರಿನಂತೆ ಅಂತರ್ ಜಲಕ್ಕೆ ಸೇರುತ್ತದೆ. ಫಲವತ್ತಾದ ಮಣ್ಣು, ಗೊಬ್ಬರ ಉಚಿತವಾಗಿ ದೊರೆಯುವುದು ಇದರ ಇನ್ನೊಂದು ಪ್ರಯೋಜನ.

ಈ ಯಶಸ್ಸಿನಿಂದ ತೃಪ್ತರಾಗದ ಮಸಗಿಯವರು ಈ ಯಶಸ್ಸು ಎಲ್ಲಾ ರೈತರದ್ದಾಗಬೇಕು ಎಂಬ ಉದ್ದೇಶದಿಂದ "ಜಲ ಸಾಕ್ಷರತಾ ಆಂದೋಲನ" ಎಂಬ ವಿನೂತನ ಸಾಪ್ತಾಹಿಕ ಕಾರ್ಯಕ್ರಮವನ್ನು ತಮ್ಮ ವೀರಾಪುರ ಗ್ರಾಮದ ತೋಟದಲ್ಲಿ ಪ್ರಾರಂಭಿಸಿದ್ದಾರೆ. ಈ ಮೂಲಕ ನೀರಿನ ಮಹತ್ವ, ಅದರ ಜಾಣತನದ ಸದ್ಬಳಕೆ ಕುರಿತು ಜಾಗೃತಿ ಮೂಡಿಸಿ 'ಅಂತರ್ಜಲ ಮರುಪೂರಣ' ಕಾರ್ಯಕ್ರಮವನ್ನು ಒಂದು ಜನಾಂದೋಲನವಾಗಿ ರೂಪಿಸಿದ್ದಾರೆ. ಅಂತರ್ಜಲ ಸಂರಕ್ಷಣೆ ಮತ್ತು ಮರುಪೂರಣ ಕಾರ್ಯದಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎನ್ನುವ ಇವರು ತಾವು ಸಂಪರ್ಕಿಸಿದ ಪ್ರತಿಯೊಬ್ಬರ ಹೊಲಗದ್ದೆಗಳಲ್ಲಿ ಒಡ್ಡುಗಳು, ಹೊಂಡಗಳು, ಚೆಕ್ ಡ್ಯಾಮ್‌ಗಳು ನಿರ್ಮಾಣಗೊಳ್ಳುವಂತೆ ಹಾಗೂ ಬದುಗಳಲ್ಲಿ ಗಿಡ ನೆಡುವಂತೆ ಆಸ್ಥೆವಹಿಸುತ್ತಾರೆ. ಇವರ ಪ್ರಕಾರ "ಒಡ್ಡಿಲ್ಲದ ಭೂಮಿ ಗೊಡ್ಡೆಮ್ಮೆ ಇದ್ದಂತೆ".

ಇದರ ಜೊತೆಗೆ ತಮ್ಮ ತೋಟದಲ್ಲಿ ಪ್ಲಾಸ್ಟಿಕ್ ಮಲ್ಚಿಂಗ್ ಮಾಡುವ ಮೂಲಕ ನೀರಿನ ಉಳಿತಾಯದ ವಿಧಾನವನ್ನು ಖುದ್ದಾಗಿ ತೋರಿಸುತ್ತಿದ್ದಾರೆ. ಇದೆಲ್ಲಕ್ಕೂ ಮೀರಿ ಇವರು ನಡೆಸುತ್ತಿರುವ ಮಹತ್ವದ ಕಾರ್ಯ ಇನ್ನೊಂದಿದೆ. ಕೆರೆಗಳೆಂದರೆ ಗೊತ್ತಿಲ್ಲದ, ಅವುಗಳ ಮಹತ್ವದ ಅರಿವಿಲ್ಲದ ಗಜೇಂದ್ರಗಡದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಗ್ರಾಮಸ್ಥರನ್ನು ಒಟ್ಟುಗೂಡಿಸಿ ತಮ್ಮ ಮುಂದಾಳತ್ವದಲ್ಲಿ ಕೆರೆಗಳ ನಿರ್ಮಾಣ ಮಾಡುತ್ತಿದ್ದಾರೆ. ಹೀಗೆ ನಿರ್ಮಿಸಿದ ಕೆರೆಗಳ ಸಂಖ್ಯೆ ಸುಮಾರು ಹದಿಮೂರು. ಯಾವುದೇ ಸರ್ಕಾರಿ ನೆರವಿಲ್ಲದೆ ಜನರ ಸಹಭಾಗಿತ್ವದಲ್ಲಿ ನಿರ್ಮಿಸಿದ ಈ ಕೆರೆಗಳು ಈಗ ನೀರಿನ ಸೆಲೆಗಳು. ಪ್ರತಿ ಒಂದು ಹೆಕ್ಟೇರ್ ಭೂಮಿಗೆ ಕನಿಷ್ಟ ಒಂದು ಗುಂಟೆಯಷ್ಟು ಕೆರೆ ಇರಬೇಕು ಎಂಬ ಸಿದ್ಧಾಂತ ಇವರದು. ಇವರು ತಮ್ಮ ಎಲ್ಲ ಜ್ಞಾನ, ಯೋಜನೆ ಮತ್ತು ಉದ್ದೇಶಗಳನ್ನು ಕುರಿತು "ನೆಲ-ಜಲ-ಜನ" ಎಂಬ ಪುಸ್ತಕವೊಂದನ್ನು ಇತ್ತೀಚೆಗೆ ಹೊರತಂದಿದ್ದಾರೆ. ಇದರಲ್ಲಿ ನೆಲದ ಫಲವತ್ತತೆಯನ್ನು ಸಾವಯವ ಕೃಷಿಯಿಂದಲೂ, ಜಲವನ್ನು ಮಳೆನೀರಿನ ಮರುಪೂರಣದಿಂದಲೂ ಹೆಚ್ಚಿಸುವ ಕಾರ್ಯವಿಧಾನಗಳನ್ನು ವಿವರಿಸಿದ್ದಾರೆ.

ಇವರ ಈ ಎಲ್ಲಾ ಸೇವಾ ಕಾರ್ಯಗಳನ್ನು ಮನಗಂಡ ಹಾಳಕೇರಿಯ ಅಭಿನವ ಅನ್ನದಾನ ಮಹಾಸ್ವಾಮಿಗಳು "ಸೇವಾ ಕೌಸ್ತುಭ" ಪ್ರಶಸ್ತಿ ಮತ್ತು 5001 ರೂಪಾಯಿಗಳ ನಗದು ಬಹುಮಾನವನ್ನು ನೀಡಿ ಗೌರವಿಸಿದ್ದಾರೆ. ಪ್ರತಿ ರೈತನೂ ತನ್ನ ಹೊಲದ ನೀರು ಆಚೆ ಹೋಗದಂತೆ ಮಾಡಲು ತಿಳುವಳಿಕೆ, ತರಬೇತಿ ನೀಡಿದ್ದಕ್ಕಾಗಿ ಗದಗದ ತೋಂಟದಾರ್ಯ ಮಹಾಸ್ವಾಮಿಗಳು ಇವರನ್ನು "ಬಯಲು ಸೀಮೆಯ ವಿದ್ಯಾರಣ್ಯ" ಎಂದು ಕರೆದಿದ್ದಾರೆ. ಸ್ವತಃ ಇವರ ಶ್ರೀಮತಿ, ಪತಿಯನ್ನು "ಅಂತರ್ಜಲ ಪಿಶಾಚಿ" ಎನ್ನುತ್ತಾರೆ. ಇವರ ಯಶಸ್ಸನ್ನು ತಿಳಿದ ಕರ್ನಾಟಕ ಸರ್ಕಾರದ ನೀರಾವರಿ ಸಚಿವರಾದ ಸನ್ಮಾನ್ಯ ಶ್ರೀ ಹೆಚ್.ಕೆ. ಪಾಟೀಲರು ಇವರ ಬಗ್ಗೆ ಒಂದು ಸಾಕ್ಷ್ಯ ಚಿತ್ರ ತಯಾರಿಸಲು ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಪ್ರಸ್ತುತ ಇವರು ಹಲವಾರು ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿಯೂ ಹಾಗೂ ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘ ಸ್ಥಾಪಿಸಿರುವ "ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ"ದ ಜಲಸಂವರ್ಧನೆ ಕಾರ್ಯಕ್ರಮದ ಯೋಜನಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.

ವಿಳಾಸ: ಅಯ್ಯಪ್ಪ ಎಂ. ಮಸಗಿ, ವೀರಾಪುರ ಗ್ರಾಮ, ಚಿಲ್‌ಝರಿ ಅಂಚೆ ರೋಣ (ತಾಲ್ಲೂಕು), ಗದಗ (ಜಿಲ್ಲೆ) - 582 114, ದೂ: 08381-512475

ಜಲಸಂರಕ್ಷಣೆಯಲ್ಲಿ ರಾಜಶೇಖರ ಗುರುಸಿದ್ದಪ್ಪ ಸಿಂಧೂರರ ಮೌನಕ್ರಾಂತಿ

ಹೆಸರು ರಾಜಶೇಖರ ಗುರುಸಿದ್ದಪ್ಪ ಸಿಂಧೂರ. ಊರು ಹಾವೇರಿ ಜಿಲ್ಲೆ ಸವಣೂರು ಬಳಿಯ ಶುಕ್ರವಾರ ಪೇಟೆ. ವೃತ್ತಿಯಿಂದ ಬೀಡಿ ಉದ್ಯಮಿಯಾದರೂ ಸಾವಯವ ಕೃಷಿಯಲ್ಲಿ ಇನ್ನಿಲ್ಲದಷ್ಟು ಆಸಕ್ತಿ. ಈ ಕಾಳಜಿಗೆ ಪ್ರಾರಂಭದಲ್ಲಿ ತಣ್ಣೀರೆರಚಿದ್ದು ನೀರಿನ ಭಾರೀ ಕೊರತೆ. ಈ ಕೊರತೆಯನ್ನು ನೀಗಿಸಲು ನಿರಂತರ ತುಡಿತ. "ಅಡಿಕೆ ಪತ್ರಿಕೆ"ಸಂಪರ್ಕದಿಂದಾಗಿ ಜಲಸಂರಕ್ಷಣೆಯ ಹುಚ್ಚು. ಈ ಹುಚ್ಚೇ ಜನ ಮೆಚ್ಚುಗೆಯ ಕೆಲಸಕ್ಕೆ ದಾರಿ.

ಮೊದಲಿಗೆ ಮುಚ್ಚಿದ್ದ ಹಿತ್ತಲ ಬಾವಿಯಿಂದ ಹೂಳು ಮಣ್ಣನ್ನು ತೆಗೆಸಿದರು. ತಮ್ಮ 40 ಎಕರೆ ಜಮೀನಿನ ಮಳೆಯ ನೀರು ಪೋಲಾಗದಂತೆ ಈ ಬಾವಿಗೆ ತಿರುಗಿಸಿದರು. ಜೊತೆಗೆ ಚಾವಣಿ ಅಂಗಳಗಳಲ್ಲಿ ಪೋಲಾಗುತ್ತಿದ್ದ ಮಳೆಯ ನೀರನ್ನು ವ್ಯವಸ್ಥಿತವಾಗಿ ಬಾವಿಗೆ ಸೇರುವಂತೆ ಮಾಡಿದರು. ಇದರಿಂದ ಅರ್ಧ ತಾಸಿಗೇ ಬರಿದಾಗುತ್ತಿದ್ದ ಕೊಳವೆ ಬಾವಿಯ ಅಂತರ್ಜಲ ಹೆಚ್ಚಾಗಿ ನಿರಂತರ ನೀರು ಕೊಡುತ್ತದೆ. ಅದನ್ನು ಊರ ಮಂದಿಯ ಬಳಕೆಗಾಗಿ ತೊಟ್ಟಿಗಳಲ್ಲಿ ತುಂಬಿ ನಲ್ಲಿ ಜೋಡಿಸಿದ್ದಾರೆ. ಸುತ್ತಲಿನ 500 ಕುಟುಂಬಗಳು ಇದೇ ನೀರನ್ನು ಅವಲಂಬಿಸಿವೆ. ಮೊದಲು ಗಡುಸಾಗಿದ್ದ ಬಾವಿಯ ನೀರು ಕ್ರಮೇಣ ಮುಕ್ಕಾಲು ಪಾಲು ಗಡುಸುತನವನ್ನು ಕಳೆದುಕೊಂಡಿತು.



ಹೆಚ್ಚಿದ ನೀರಿನ ರುಚಿ ಅರಿತ ರಾಜಶೇಖರರಿಗೆ ಮನದ ತುಂಬ ನೀರಿನದೇ ಚಿಂತೆ. ಲಕ್ಷ್ಮೇಶ್ವರದ ಶಾಲೆ, ಅಣ್ಣನ ಮನೆ ಇನ್ನೂ ಮುಂತಾದೆಡೆ ನೀರಿಂಗಿಸುವ ಕೆಲಸ ಮಾಡಿದರು. ಇತರರಿಗೆ ಪ್ರೇರಣೆ ನೀಡಿದರು. ಒಂದು ಕಿಲೋ ಮೀಟರ್ ದೂರವನ್ನು ಬಳಸಿ ಹರಿದು ಹಾಳಾಗುತ್ತಿದ್ದ ನೀರನ್ನು ನೇರವಾಗಿ ತಂದು ಕೆರೆಗೆ ಉಣಿಸಿದರು. ಹತ್ತಾರು ಎಕರೆ ಇಳಿಮೇಡಿನ ನೀರು ಕೆರೆಗೆ ಸೇರುವಂತೆ ಮಾಡಿದರು. ಈ ಮಧ್ಯೆ ಸವಣೂರಿನ ನಗರ ಸಭೆಗೆ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ನೀರಿನ ಸಮುದಾಯ ಚಿಂತನೆಗೊಂದು ಹೊಸ ಆಯಾಮ ದೊರಕಿತು.

ಹರಿಯುತ್ತಿದ್ದ ಮಳೆ ನೀರು ವ್ಯರ್ಥವಾಗಿ ಹೊಳೆ ಸೇರುತ್ತಿತ್ತು. ಹೀಗೆ ವ್ಯರ್ಥವಾಗಿ ಹರಿಯುವ ನೀರನ್ನು ತಡೆಯಲು ಸುಮಾರು ಒಂದೂವರೆ ಎಕರೆ ವಿಸ್ತೀರ್ಣದ, ಹದಿನೈದು ಅಡಿ ಆಳದ ಕೆರೆಯೊಂದನ್ನು 120 ಅಡಿ ಅಗಲ ಮತ್ತು 10 ಅಡಿ ಎತ್ತರದ ತಡೆಗೋಡೆ ನಿರ್ಮಿಸುವ ಮೂಲಕ ಕಟ್ಟಿಸಿದರು. ಇಲ್ಲಿ ಐದು ಕೋಟಿ ಲೀಟರ್ ನೀರು ನಿಲ್ಲುತ್ತದೆ ಎಂದು ಅಂದಾಜಿಸಿದ್ದಾರೆ. ಈ ಬಾರಿಯ ಭೀಕರ ಬರಗಾಲದಲ್ಲಿಯೂ ಈ ಕೆರೆ ಮೂರು ಬಾರಿ ತುಂಬಿ ಹರಿದಿದೆ. ಇದರಿಂದ ಸುತ್ತಲ ಎರಡು ಕಿ.ಮೀ.ಗಳವರೆಗೆ ಅಂತರ್ಜಲ ಹೆಚ್ಚಾಗಿದ್ದು ಸುತ್ತ ಮುತ್ತಲ ಜನರಿಗೆ, ದನಕರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಇಲ್ಲದಂತಾಗಿದೆ. ಜೊತೆಗೆ ಈ ಕೆರೆಯಲ್ಲಿ ಮೀನು ಸಾಕಾಣೆಯೂ ನಡೆಯುತ್ತಿದೆ. ಕೆರೆಯನ್ನು ನಿರ್ಮಿಸಿದ್ದು ಇವರ ಸ್ವಂತ ಜಮೀನಿನಲ್ಲಿ, ಇದಕ್ಕೆ ತಗುಲಿದ ಐದು ಲಕ್ಷ ರೂಪಾಯಿಗಳ ವೆಚ್ಚವನ್ನು ಭರಿಸಿದ್ದೂ ಇವರೆ.

ಹೊಲದ ಸುತ್ತ ಮತ್ತು ಹೊಲಗಳ ಮಧ್ಯೆ ಒಡ್ಡುಗಳನ್ನು ನಿರ್ಮಿಸಿದ್ದಾರೆ. ಈ ಕಲ್ಲೊಡ್ಡುಗಳಿಂದಾಗಿ ಮಳೆ ನೀರು ಓಡಿ ಹೋಗದಂತೆ ತಡೆಯುತ್ತದೆ, ನಿಲ್ಲುತ್ತದೆ ಮತ್ತು ಇಂಗುತ್ತದೆ. ಮಳೆನೀರಿಗೆ ಕೊಚ್ಚಿ ಬಂದ ಫಲವತ್ತಾದ ಮಣ್ಣು ಇದರಲ್ಲಿ ಸಂಗ್ರಹವಾಗುತ್ತದೆ. ಈ ಸಂಗ್ರಹವಾದ ಮಣ್ಣನ್ನು ಬೇಸಿಗೆಯಲ್ಲಿ ಹೊಲಕ್ಕೆ ಹರಡುತ್ತಾರೆ. ಹೊಲದಲ್ಲಿ ಕಳೆ ತೆಗೆದದ್ದನ್ನು ಈ ಒಡ್ಡಿನಲ್ಲಿ ಹಾಕಿ ಮರುಬಳಕೆ ಮಾಡುತ್ತಾರೆ. ಈ ಒಡ್ಡುಗಳಲ್ಲಿ ಗಿಡ ಮತ್ತು ಹೆಮಟಾ ಹುಲ್ಲನ್ನು ಬೆಳೆಸಿದ್ದಾರೆ. ಇದರಿಂದ ನೀರು ಭರದಿಂದ ಇಂಗುತ್ತದೆಯಂತೆ.

ದೇಶಿ ಆಕಳ ಸಗಣಿ ಪ್ರತಿ 50 ಕೆ.ಜಿ.ಗೆ 1 ಕೆ.ಜಿ, ತುಪ್ಪ, 1 ಲೀಟರ್ ಮೊಸರು, 11 ಕೆ.ಜಿ ಹೊಲಸು ಬೆಲ್ಲಗಳನ್ನು ಬೆರಸಿ 200 ಲೀಟರ್ ನೀರಿನಲ್ಲಿ ಕಲಸಿ ಸಿಂಪಡಿಸುವುದರಿಂದ ಹೊಲದಲ್ಲಿ ಸೂಕ್ಷ್ಮಾಣುಜೀವಿಗಳ ಪ್ರಮಾಣ ವೃದ್ಧಿಯಾಗಿ ಆರೋಗ್ಯಕರ ಬೆಳೆ ಬರುತ್ತದೆ ಮತ್ತು ರೋಗ ನಿಯಂತ್ರಣಕ್ಕೆ ಸಹಕಾರಿ. ಗೊಬ್ಬರ ತಯಾರಕರು ಎರೆಹುಳು ಸಾಗಾಣಿಕೆ ತೊಟ್ಟಿಗೆ ಪ್ರತಿ ದಿನ ನೀರು ಸಿಂಪಡಿಸುತ್ತಾ ಇದ್ದು ತೊಟ್ಟಿಯ ತಳಬಾಗದಲ್ಲಿ ಮಾಡಿರುವ ರಂಧ್ರದಿಂದ ಸಾರದ ನೀರನ್ನು ಸಂಗ್ರಹಿಸಿ ಗಿಡಬಳ್ಳಿಗಳಿಗೆ ಸಿಂಪಡಿಸಿದರೆ ಉತ್ತಮ ಗುಣ ಮಟ್ಟದ ರಸಭರಿತ ಹಣ್ಣು ಬೆಳೆಗಳನ್ನು ಪಡೆಯಬಹುದು. ಗೋಮೂತ್ರದಲ್ಲಿ ಬೇವಿನ ತೊಪ್ಪಲನ್ನು 21 ದಿನದವರೆಗೆ ನೆನೆಸಿ ನಂತರ 1 ಲೀಟರ್‌ಗೆ 11 ಲೀಟರ್ ನೀರು ಬೆರೆಸಿ ಮಳೆಗಾಲದಲ್ಲಿ ಸಿಂಪಡಿಸಿದರೆ ಕ್ರಿಮಿಕೀಟಗಳನ್ನು ನಾಶಪಡಿಸಬಹುದು ಎಂಬುದು ಇವರ ಅನುಭವದ ಮಾತು.

ಇವರ ಈ ಮೌನ ಕ್ರಾಂತಿಯನ್ನು ತಿಳಿದ ಮಂಡ್ಯದ ಜನದನಿ ಸಾಂಸ್ಕೃತಿಕ ಟ್ರಸ್ಟ್ ಇವರಿಗೆ ಇಂಡುವಾಳು ಹೆಚ್. ಹೊನ್ನಯ್ಯ ಸಮಾಜ ಸೇವಾ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸಿದೆ. ಜಿಲ್ಲಾ ಉಸ್ತುವಾರಿ ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವ ಕೆ.ಬಿ ಕೋಳಿವಾಡ ಅವರು, ಇವರ ಕಾರ್ಯಕ್ಷೇತ್ರವನ್ನು ವೀಕ್ಷಿಸಿ, ಮೆಚ್ಚಿ ರಾಜಶೇಖರರು ಕೈಗೊಂಡ ಕ್ರಮಗಳನ್ನು ಸರಕಾರಿ ಬೋರ್‌ವೆಲ್‌ಗಳಿಗೆ ಕಾಯಕಲ್ಪ ನೀಡಲು ಬಳಸಿಕೊಳ್ಳುವಂತೆ ಜಿಲ್ಲಧಿಕಾರಿಗಳು ಹಾಗೂ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಇವರ ಯಶಸ್ಸಿಗೆ ಇಷ್ಟು ಸಾಕ್ಷಿ ಸಾಕಲ್ಲವೆ?

ವಿಳಾಸ: ರಾಜ ಶೇಖರಪ್ಪ ಗುರುಸಿದ್ಧಪ್ಪ ಸಿಂಧೂರ
ಶುಕ್ರವಾರ ಪೇಟೆ, ಸವಣೂರ, ಹಾವೇರಿ (ಜಿ) - 581 118

ಸಾವಯುವ ಕೃಷಿ ಏಕೆ? ಹೇಗೆ?

ನಾಲ್ಕು ದಶಕಕ್ಕೂ ಮೀರಿದ ಕೃಷಿ ಸಂಶೋಧನೆ ಮತ್ತು ಬೋಧನೆಯ ಅನುಭವ ಹೊಂದಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು, ಹಾಗೂ ಸಾವಯುವ ಕೃಷಿಯ ಪರಿಣಿತರು ಆದ ಡಾ. ಜಿ.ಕೆ. ವೀರೇಶ್‌ರವರ ಇತ್ತೀಚಿನ ಪುಸ್ತಕ ಸಾವಯುವ ಕೃಷಿ ಏಕೆ? ಹೇಗೆ? ಸಾವಯುವ ಕೃಷಿಯ ಬಗ್ಗೆ ಜಪಾನ್ ಮತ್ತು ಅಮೆರಿಕೆಯಲ್ಲಿ ಹೆಚ್ಚಿನ ಪರಿಣತಿ ಪಡೆದಿರುವ ಡಾ. ವೀರೇಶ್‌ರವರು ಸಾವಯುವ ಕೃಷಿ ಉತ್ತೇಜಕ ಸಂಘದ ಸಂಸ್ಥಾಪಕ ಅಧ್ಯಕ್ಷರಾಗಿದ್ದಾರೆ. ಈ ಸಂಘವು ಸಾವಯುವ ಕೃಷಿ ಉತ್ಪನ್ನಗಳನ್ನು ಪರೀಕ್ಷಿಸಿ ದೃಢೀಕರಿಸಲು ಭಾರತ ಸರ್ಕಾರದ ಮನ್ನಣೆಯನ್ನು ಪಡೆದುಕೊಂಡಿದೆ.

ತಮ್ಮ ಸಂಪೂರ್ಣ ಅನುಭವವನ್ನು ಧಾರೆ ಎರೆದು ಬರೆದಿರುವ "ಸಾವಯುವ ಕೃಷಿ ಏಕೆ? ಹೇಗೆ?" ಎಂಬ ಪುಸ್ತಕವು ಅವರು ಕನ್ನಡಿಗರಿಗೆ ಅದರಲ್ಲೂ ಕನ್ನಡಿಗ ಕೃಷಿಕರಿಗೆ ಕೊಟ್ಟ ಬಹುದೊಡ್ಡ ಕೊಡುಗೆಯಾಗಿದೆ. ಇದರ ಹೆಸರೇ ಸೂಚಿಸುವಂತೆ ಈ ಪುಸ್ತಕದಲ್ಲಿ ಸಾವಯುವ ಕೃಷಿ ಅಗತ್ಯ ಮತ್ತು ಪ್ರಾಮುಖ್ಯತೆಗಳನ್ನು ಸವಿವರವಾಗಿ ನೀಡಲಾಗಿದೆ. ಸಾವಯುವ ಕೃಷಿಯಲ್ಲಿ ಮಣ್ಣು-ಗೊಬ್ಬರಗಳ ಮಹತ್ವಗಳನ್ನು ತಿಳಿಸಲಾಗಿದೆ. ಕೊಟ್ಟಿಗೆ ಗೊಬ್ಬರ, ವಿವಿಧ ರೀತಿಯ ಕಾಂಪೋಸ್ಟ್ ಗೊಬ್ಬರ, ಎರೆಗೊಬ್ಬರ, ಹಸಿರೆಲೆ ಗೊಬ್ಬರ ಮುಂತಾದವುಗಳ ತಯಾರಿಕೆ, ಸಂರಕ್ಷಣೆ ಮತ್ತು ಬಳಕೆ ವಿಧಾನಗಳನ್ನು ವಿಸ್ತಾರವಾಗಿ ಕೊಡಲಾಗಿದೆ. ಮಣ್ಣಿನ ಫಲವತ್ತತೆಗೆ ಮಣ್ಣು ಜೀವಿಗಳ, ಸೂಕ್ಷ್ಮಾಣು ಜೀವಿಗಳ ಮತ್ತು ಸಾವಯುವ ವಸ್ತುಗಳ ಮಹತ್ವವನ್ನು ವಿವರಿಸುವ ಜೊತೆಗೆ ರೈಜೋಬಿಯಂ, ಅಝೋಟೊಬ್ಯಾಕ್ಟರ್, ಅಝೋಲಾ ಮುಂತಾದ ಜೈವಿಕ ಗೊಬ್ಬರಗಳ ಉಪಯೋಗಗಳನ್ನು ತಿಳಿಸಲಾಗಿದೆ.

ಸಾವಯುವ ಕೃಷಿಯಲ್ಲಿ ಸಸ್ಯ ಸಂರಕ್ಷಣೆ, ಕರ್ನಾಟಕದಲ್ಲಿ ಸಾವಯುವ ಕೃಷಿ, ಸಾವಯುವ ಕೃಷಿಯ ನೀತಿ ನಿಯಮಗಳು, ಸುಸ್ಥಿರ ಕೃಷಿಗಾಗಿ ಸಾವಯುವ ಕೃಷಿ ಮುಂತಾಗಿ ಚರ್ಚಿಸಲ್ಪಟ್ಟಿರುವ ಈ ಪುಸ್ತಕವು ಸಾವಯುವ ಕೃಷಿಯ ಬಗ್ಗೆ ತಿಳಿಯಲಿಚ್ಛಿಸುವವರು ಮತ್ತು ಅನುಸರಿಸಲು ಬಯಸುವವರಿಗೆ ಉತ್ತಮ ಮಾಹಿತಿಗಳನ್ನೊಳಗೊಂಡಿದೆ.

ಪ್ರಕಾಶಕರು: ಸಾವಯುವ ಕೃಷಿ ಉತ್ತೇಜಕ ಸಂಘ (APOF), ನಂ.3, 9ನೇ ಅಡ್ಡ ರಸ್ತೆ, 5ನೇ ಮುಖ್ಯ ರಸ್ತೆ, ಜಯಮಹಲ್, ಬೆಂಗಳೂರು-46

ನೆಲದ ಮಾತು - ಮಾಸ ಪತ್ರಿಕೆ

ಜಾಗತೀಕರಣ ಇಂದು ಸಮಾಜದ ಎಲ್ಲಾ ಮಗ್ಗಲುಗಳನ್ನು ಹೊಕ್ಕಿದೆ. ಇದು ಬದುಕಿನ ಎಲ್ಲಾ ರಂಗಗಳಲ್ಲೂ ತನ್ನದೇ ಪ್ರಭಾವವನ್ನು ಬೀರುತ್ತಲಿದೆ. ಪರಿಸರ ಕೂಡ ಇದರಿಂದ ಹೊರತಲ್ಲ. ಈ ಸಂದರ್ಭದಲ್ಲಿ ಸಾಹಿತಿ ಹಾಗೂ ಪರಿಸರ ಸ್ನೇಹಿಗಳಾದ ಶ್ರೀ ಶೂದ್ರ, ಶ್ರೀನಿವಾಸ್‌ರವರ ಸಾರಥ್ಯದಲ್ಲಿ ನೆಲದ ಮಾತು ಎಂಬ ಪತ್ರಿಕೆ ಹೊರಬರುತ್ತಿದೆ. "ನೆಲದ ಮಾತು"ವಿನ ಮೂಲಕ ನಾನಾ ರೀತಿಯ ಚಟುವಟಿಕೆಗಳನ್ನು ರೂಪಿಸಲಾಗುತ್ತಿದೆ. ಮುಖ್ಯವಾಗಿ ಪರಿಸರ ಚಳುವಳಿ ಕುರಿತಂತೆ ಕರ್ನಾಟಕದ ಉದ್ದಗಲಕ್ಕೂ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವ ಎಲ್ಲರನ್ನು ಒಂದೆಡೆ ಸೇರಿಸುವುದು ನಮ್ಮನ್ನು ಕಾಡುತ್ತಿರುವ ಪ್ರಮುಖ ವಿಷಯಗಳನ್ನು ಕುರಿತು ಚರ್ಚಿಸುವುದು ಮತ್ತು ಜಾಗತೀಕರಣದ ಇತಿಮಿತಿಗಳನ್ನು ಸ್ಪಷ್ಟಪಡಿಸುವುದು "ನೆಲದ ಮಾತು"ವಿನ ಉದ್ದೇಶವಾಗಿದೆ. ಪರಿಸರ ಎಂದರೆ ಕೇವಲ ಗಿಡ, ಮರ, ವಾಯು ಹಾಗೂ ಜಲ ಮಾತ್ರವಲ್ಲ ಎನ್ನುತ್ತಾ ನಮ್ಮ ಮನಸ್ಸು ಹೀನ ಮಟ್ಟಕ್ಕೆ ತಲುಪದಂತೆ ಅಭಿರುಚಿ ಅರಳುವಿಕೆಯಲ್ಲಿ ಮಹತ್ವದ ಪಾತ್ರವಹಿಸುವುದು "ನೆಲದ ಮಾತು"ವಿನ ಆಶಯವಾಗಿದೆ. ಇದಕ್ಕಾಗಿ ವಿದ್ವತ್‌ಪೂರ್ಣ ಲೇಖನಗಳನ್ನು ಪ್ರಕಟಿಸುತ್ತಿದೆ. ಈ ಪತ್ರಿಕೆಗೆ ಸಿ. ಯತಿರಾಜುರವರು ಸಹಾಯಕ ಸಂಪಾದಕರಾಗಿದ್ದು ಎ.ಎಸ್. ಯಲ್ಲಪ್ಪರೆಡ್ಡಿ, ಡಿ.ಕೆ. ಚಾಟಾ, ನಾಗೇಶ ಹೆಗಡೆ, ಕೆ. ಮರುಳ ಸಿದ್ದಪ್ಪ, ಸುಹಾಸ್ ವೈ. ಎಂ.ಸಿ.ಎ, ವಿ. ಜಗನ್ನಾಥ್, ಕೆ.ಜಿ. ಶಾಂತರಾಂ ಮತ್ತು ರಂಜಾನ್ ದರ್ಗಾರವರು ಸಲಹೆಗಾರರಾಗಿರುತ್ತಾರೆ.

ಪ್ರಕಾಶಕರು: ಎಸ್. ಪ್ರೀತಿ, ಕವಿಮನೆ, ಅಣ್ಣಯ್ಯ ರೆಡ್ಡಿ ಬಡಾವಣೆ, ಜೆ.ಪಿ.ನಗರ 9ನೇ ಹಂತ, ಬೆಂಗಳೂರು-78, ದೂ. 6551762

ನೆಲ-ಜಲ-ಜನ

ಅಂತರ್ಜಲ ಮರುಪೂರಣ ಮತ್ತು ಅಭಿವೃದ್ಧಿಯಲ್ಲಿ ಅಚ್ಚರಿಯ ಸಾಧನೆಗೈದಿರುವ ಬಯಲು ಸೀಮೆಯ ಭಗೀರಥ ಎಂದೆನಿಸಿಕೊಂಡಿರುವ ಶ್ರೀ ಅಯ್ಯಪ್ಪ ಮಸಗಿಯವರ ಸಾಧನೆಗಳು ಅಂತರ್ಜಲ ಅಭಿವೃದ್ಧಿ, ಮಳೆನೀರು ಕೊಯ್ಲು, ಕೃಷಿ ಪರ ಚಟುವಟಿಕೆ ಮತ್ತು ರೈತರ ವ್ಯಕ್ತಿತ್ವ ವಿಕಸನಕ್ಕೆ ಸಂಭಂದಪಟ್ಟ ಸಮಗ್ರ ಮಾಹಿತಿಗಳನ್ನೊಳಗೊಂಡ ಪುಸ್ತಕ. ರೈತ ಸಮೂಹಕ್ಕೆ ಸ್ಫೂರ್ತಿ ಮತ್ತು ಚೈತನ್ಯಗಳನ್ನು ನೀಡಬಲ್ಲ ಉಪಯುಕ್ತ ಮಾಹಿತಿಗಳನ್ನೊಳಗೊಂಡ 'ನೆಲ-ಜಲ-ಜನ' ಕೃತಿಯನ್ನು ಬೆಂಗಳೂರಿನ ಅಕ್ಷರ ಜ್ಯೋತಿ ಪ್ರಕಾಶನ ಪ್ರಕಟಿಸಿದೆ.

ಅಕ್ಷರಜ್ಯೋತಿ ಪ್ರಕಾಶನ: ನಂ.303, ನೇ ಮುಖ್ಯ ರಸ್ತೆ, 7ನೇ 'ಬಿ' ಅಡ್ಡ ರಸ್ತೆ, ಜಕ್ಕೂರು ಬಡಾವಣೆ, ಬೆಂಗಳೂರು-64, ದೂ: 080-3636914

ಕೃಷಿ ಪತ್ರಿಕೋದ್ಯಮ ಪ್ರಶಸ್ತಿಗೆ ಆಹ್ವಾನ

ಧಾರವಾಡದ ಪರ್ಯಾಯ ಕೃಷಿಮಾಧ್ಯಮ ಕೇಂದ್ರ ಮೂರನೇ ವರ್ಷದ ರಾಜ್ಯಮಟ್ಟದ ಕೃಷಿ ಪತ್ರಿಕೋದ್ಯಮ ಪ್ರಶಸ್ತಿಗೆ ಎರಡು ವಿಭಾಗಗಳಲ್ಲಿ ಪ್ರವೇಶಗಳನ್ನು ಆಹ್ವಾನಿಸಿದೆ. ಮೊದಲನೆಯದ್ದು ಕೃಷಿಕರೇ ಬರೆದ ಲೇಖನಗಳು ಹಾಗೂ ಎರಡನೆಯದ್ದು ಮುಕ್ತ ವಿಭಾಗವಾಗಿದ್ದು ಇದರಲ್ಲಿ ಕೃಷಿಕರೇತರ ಎಲ್ಲರೂ ಭಾಗವಹಿಸಬಹುದಾಗಿದೆ.

ಕನ್ನಡದಲ್ಲಿ ಅರ್ಥಪೂರ್ಣ ಕೃಷಿ ಪತ್ರಿಕೋದ್ಯಮಕ್ಕೆ ಉತ್ತೇಜನ ನೀಡುವುದಕ್ಕಾಗಿ ಕೇಂದ್ರ ಈ ಪ್ರಶಸ್ತಿ ಸ್ಥಾಪಿಸಿದೆ. ಕೃಷಿಕರ ಅಗತ್ಯಗಳನ್ನಾಧರಿಸಿದ ಅವರ ನೋವು-ನಲಿವುಗಳ ಮೇಲೆ ಬೆಳಕು ಚೆಲ್ಲುವ, ಅವರ ಸಮಸ್ಯೆಗಳ ಬಗ್ಗೆ ಜನಾಭಿಪ್ರಾಯ ಮೂಡಿಸುವ ವಸ್ತುನಿಷ್ಠ ಹಾಗೂ ವಿಚಾರಪೂರ್ಣ ಬರಹಗಳು ಕೃಷಿ ಪತ್ರಿಕೋದ್ಯಮವನ್ನು ಸದೃಢಗೊಳಿಸಬೇಕೆಂಬ ಆಶಯದೊಂದಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಆಸಕ್ತರು ಸೆಪ್ಟೆಂಬರ್ 2002ರಿಂದ ಆಗಸ್ಟ್ 2003ರ ನಡುವೆ ಯಾವುದೇ ಪತ್ರಿಕೆ ಅಥವಾ ನಿಯತಕಾಲಿಕದಲ್ಲಿ ಪ್ರಕಟಗೊಂಡ ಕೃಷಿಕಪರ ಬರಹವನ್ನು ಕಳುಹಿಸಿಕೊಡಲು ಕೋರಲಾಗಿದೆ. ಒಬ್ಬರು ಗರಿಷ್ಠ ಎರಡು ಲೇಖನಗಳನ್ನು ಕಳುಹಿಸಬಹುದು. ಮೇಲಿನ ಯಾವ ವಿಭಾಗಕ್ಕೆ ಪ್ರವೇಶ ಕಳುಹಿಸುತ್ತಿದ್ದೀರಿ ಎಂಬುದನ್ನು ಸ್ಪಷ್ಟವಾಗಿ ನಮೂದಿಸಿ. ಪೂರ್ಣ ವಿಳಾಸ ಹಾಗೂ ಉದ್ಯೋಗದ ವಿವರ ಬರೆಯುವುದು ಅಗತ್ಯ. ಪ್ರವೇಶದೊಂದಿಗೆ ಐದು ರೂಪಾಯಿ ಸ್ಟಾಂಪ್ ಹಚ್ಚಿದ ಸ್ವ ವಿಳಾಸ ಬರೆದ ಉದ್ದನೆಯ ಲಕೋಟೆ ಲಗ್ತೀಕರಿಸಲು ಕೋರಿಕೆ. ಪ್ರವೇಶ ಸ್ವೀಕರಿಸಲು ಕೊನೆಯ ದಿನಾಂಕ ಸೆಪ್ಟೆಂಬರ್ 5, 2003. ಲೇಖನಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸತಕ್ಕದ್ದು.

ವಿಳಾಸ: ಅನಿತಾ ಪೈಲೂರು, ಪರ್ಯಾಯ ಕೃಷಿಮಾಧ್ಯಮ ಕೇಂದ್ರ,
ಕೃಷ್ಣಾಲಯ, 1ನೇ ಮುಖ್ಯ ರಸ್ತೆ, 4ನೇ ಅಡ್ಡರಸ್ತೆ, ನಾರಾಯಣಪುರ,
ಧಾರವಾಡ - 580 008

ತಳಮಟ್ಟದ ಜನರ ಪುರಸ್ಕಾರಕ್ಕಾಗಿ 'ಸೃಷ್ಟಿ' ಸನ್ಮಾನ ಸಭೆ

ಲೇಖನ: ಅನಸೂಯ ಶರ್ಮ

'ಸೃಷ್ಟಿಸನ್ಮಾನ 2003' ಸಮಾರಂಭವು ಏಪ್ರಿಲ್ 22ರಂದು ಅಹಮದಾಬಾದಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸಭಾಂಗಣದಲ್ಲಿ ಸರಳ ಹಾಗೂ ಅರ್ಥಪೂರ್ಣವಾಗಿ ನಡೆಯಿತು. ನೂರಾರು ಸಮಾನ ಮನಸ್ಕ ಜನಗಳ ಸಮ್ಮುಖದಲ್ಲಿ ಹಲವಾರು ವ್ಯಕ್ತಿಗಳನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಹಲವಾರು ವಿಶಿಷ್ಟ ವ್ಯಕ್ತಿಗಳ ಪರಿಚಯ ಮಾಡಿ ಕೊಡಲಾಯಿತು.

ಒಂದು ಗ್ರಾಮದಲ್ಲಿ ಶಿಕ್ಷಕರಾಗಿರುವ ಟಾಕರ್ಶೀಭಾಯಿ ಆ ಗ್ರಾಮದಲ್ಲಿ ಜನಿಸಿದ ಎಲ್ಲಾ ಮಕ್ಕಳನ್ನು ಗುರುತಿಸಿ ಅವರಿಗೆ ಶುಭಾಷಯ ಪತ್ರ ಕಳಿಸಿ 'ಈ ಮಗುವನ್ನೇ ನಾಲ್ಕು ವರ್ಷಗಳ ನಂತರ ನನ್ನ ಶಾಲೆಗೆ ಸ್ವಾಗತಿಸಲು ಕಾತರನಾಗಿದ್ದೇನೆ' ಎಂದು ಬರೆದಿದ್ದರು. ಮಕ್ಕಳಿಗೆ ಶಿಕ್ಷಣ ಅಮೂಲ್ಯ ಹಾಗೂ ಅತ್ಯಗತ್ಯವಾದುದು ಅದನ್ನು ಕೊಡಿಸುವುದು ಒಂದು ಸಾಮಾಜಿಕ ಜವಾಬ್ದಾರಿ ಎಂಬುದು ಅವರ ಅರಿವು ಮತ್ತು ನಡೆ. ಶರ್ಮಾಜಿ ಎಂಬ ಶಿಕ್ಷಕರು ಮಕ್ಕಳ ಹಾಗೂ ಪಾಲಕರ ಸಹಕಾರದಿಂದ ಶಾಲೆಯೊಂದನ್ನು ಕಟ್ಟಿಸಿ ಅದರ ಬೀಗದ ಕೈಯನ್ನು ಅಲ್ಲಿನ ಶಿಕ್ಷಣಾಧಿಕಾರಿಗೆ ಕೊಟ್ಟು ಉಸ್ತುವಾರಿ ನೋಡಿಕೊಳ್ಳುವಂತೆ ಕೋರಿದರು. ಎಂತಹ ಉದಾತ್ತ ಧ್ಯೇಯ!.

ಸೃಷ್ಟಿಯ ಶೋಧ ಯಾತ್ರೆಯ ಸಮಯದಲ್ಲಿ ಔಷಧೀಯ ಸಸ್ಯಗಳ ಉಪಯೋಗದ ಬಗ್ಗೆ ಹಾಡೊಂದನ್ನು ಕಟ್ಟಿ, ರಾಗ ಸಂಯೋಜಿಸಿ ಮಕ್ಕಳ ತಿಳುವಳಿಕೆ ಹೆಚ್ಚಿಸಿದ, ಹಾಗೂ ಶಿಕ್ಷಣದಲ್ಲಿ ನವೀನ ರೀತಿಯ ಪಾಠ್ಯಕ್ರಮ ರೂಪಿಸಿದ ಹೆಗ್ಗಳಿಕೆ ತಮಿಳುನಾಡಿನ ಶಿಕ್ಷಕಿ ಶ್ರೀಮತಿ ಜಯಲಕ್ಷ್ಮಿಯವರದು.

ತಮ್ಮ ನೃತ್ಯ ಹಾಗೂ ಜಾನಪದ ಹಾಡುಗಳಿಂದ ಮಕ್ಕಳನ್ನು ಆಕರ್ಷಿಸಿ, ಅವರಿಗೆ ಗಿಡಮೂಲಿಕೆಗಳ ಪರಿಚಯ ಹಾಗೂ ಉಪಯೋಗ ತಿಳಿಸಿ, ಮಕ್ಕಳನ್ನು ಶಿಕ್ಷಣದತ್ತ ಆಕರ್ಷಿಸಿದ ಕೀರ್ತಿ ಮೋತಿಭಾಯ್ ಅವರದು.

ತಮಿಳು ನಾಡಿನ ವೃಕ್ಷಪ್ರೇಮಿ ಕರುಣಾನಿಧಿ. ವೃತ್ತಿಯಲ್ಲಿ ವಾಹನಚಾಲಕ. ಪ್ರವೃತ್ತಿಯಲ್ಲಿ ಒಂದು ಲಕ್ಷ ಮರಗಳನ್ನು ದೇವಸ್ಥಾನಗಳಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ನೆಟ್ಟು ಪೋಷಿಸಿದ್ದಾರೆ. 3 ಲಕ್ಷ ಮರಗಳನ್ನಾದರೂ ನೆಡುವ ಧ್ಯೇಯ ಈತನದು. ಈ ಎಲ್ಲಾ ಮಹನೀಯರು ಹಾಗೂ ಕರ್ನಾಟಕದ ನಾಲ್ವರು ಸೇರಿದಂತೆ ಹಲವು ರಾಜ್ಯಗಳಿಂದ ಆರಿಸಿದ 62 ಜನರಿಗೆ ಈ ಅವಿಸ್ಮರಣೀಯ ಸಮಾರಂಭದಲ್ಲಿ ಸೃಷ್ಟಿಸನ್ಮಾನ ಪ್ರಧಾನ ಮಾಡಲಾಯಿತು. ವಿಶೇಷವಾಗಿ, ಕಷ್ಟ ಸಾಧ್ಯ ಬದುಕನ್ನು ಎದುರಿಸಿ ಸಮಾಜದಲ್ಲಿ ತಮ್ಮನ್ನು ಗುರುತಿಸಿಕೊಂಡು ಜೀವನ ಸವೆಸಿ, ಬಾಳು ಮುಸ್ಸಂಜೆಯಲ್ಲಿರುವ ಶತಾಯುಗಳಾದ ಮೂವರು ಮಹಿಳೆಯರನ್ನು ಗುರುತಿಸಿ ಸನ್ಮಾನಿಸಿದ್ದು ಈ ಸಮಾರಂಭದ ವಿಶೇಷ. 'ಸೃಷ್ಟಿ' ಇಂತಹ ಅಪರೂಪದ ವ್ಯಕ್ತಿಗಳ ಸನ್ಮಾನ ಮಾಡುವುದರ ಜೊತೆಗೆ ಮತ್ತೊಂದು ರೀತಿಯಲ್ಲಿ ಜನತಾ ಸೇವೆ ಮಾಡುತ್ತಲಿದೆ. ಪ್ರಯೋಗಾಲಯ ಒಂದನ್ನು ನಿರ್ಮಿಸಿ ಗಿಡ ಮೂಲಿಕೆಗಳಿಂದ ಪಶುಗಳ ಚಿಕಿತ್ಸೆ ನಡೆಸಲು ಅನುಕೂಲವಾಗುವಂತೆ ಪ್ರಯೋಗ ನಡೆಸಿ, ಈಗಾಗಲೇ 14 ಔಷಧಿಗಳನ್ನು ಬಿಡುಗಡೆ ಮಾಡಿದೆ. ಇನ್ನೂ ಕೆಲವು ಪ್ರಯೋಗದ ಹಂತದಲ್ಲಿವೆ. ಗಿಡಗಳಿಗೆ ಉಪಯೋಗಿಸಬಹುದಾದ ಔಷಧಗಳೂ ಮಾರುಕಟ್ಟೆಗೆ ಬಂದಿವೆ.

ಕಚ್‌ನಲ್ಲಿ ನಡೆದ ಭೂಕಂಪದಿಂದ ನಷ್ಟಕ್ಕೊಳಗಾದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಜನಜಾಗೃತಿ ಉಂಟು ಮಾಡಿದೆ.

ಹೀಗೆ ನವೀನ ರೀತಿಯ ಸಮಾಜದ ನಿರ್ಮಾಣದತ್ತ ದಿಟ್ಟ ಹೆಜ್ಜೆ ಹಾಕುತ್ತಿರುವ 'ಸೃಷ್ಟಿ'ಯ ಕೆಲಸ ನಿಜಕ್ಕೂ ಶ್ಲಾಘನೀಯ.

'ಸೃಷ್ಟಿ' ಸನ್ಮಾನ ವಿಜೇತ ಕನ್ನಡಿಗರು

1. ಅಯ್ಯಪ್ಪ ಮಸಗಿ: ಬತ್ತಿದ ಕೊಳವೆ ಬಾವಿಗಳ ಬ್ರಹ್ಮ ಎಂದೇ ಹೆಸರುವಾಸಿಯಾಗಿರುವ ಮಸಗಿಯವರು ಜಲಮರುಪೂರಣ ಹಾಗೂ ಮಳೆ ನೀರ ಕೊಯ್ಲು ಬಗ್ಗೆ ಜನಜಾಗೃತಿ ಮೂಡಿಸಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಹಾಗೂ ಕವಿತೆಗಳ ಮೂಲಕ ಜನರ ಮನ ಒಲಿಸುವಲ್ಲಿ ಸಫಲರಾಗಿದ್ದಾರೆ.

2. ಜಿ. ಕೃಷ್ಣಪ್ರಸಾದ್: ಬೆಂಗಳೂರಿನ ಗ್ರೀನ್ ಫೌಂಡೇಷನ್ ಸಂಸ್ಥೆಯ ಇವರು ಸಾವಯವ ಕೃಷಿಯತ್ತ ಒಲವಿರುವ ನೂರಾರು ಜನರನ್ನು ಸಂಘಟಿಸಿ 'ಸಹಜ ಸಮೃದ್ಧ' ಬಳಗ ಕಟ್ಟಿದವರು. ಇನ್ನಿತರ ಸಮಾನ ಮನಸ್ಕ ಸಂಘಟನೆಗಳನ್ನು ಆರಂಭಿಸಿ ಇವುಗಳ ಒಂದು ರಾಜ್ಯಮಟ್ಟದ ಜಾಲವನ್ನೇ ನಿರ್ಮಿಸಿ, ಅದರ ಮೂಲಕ ನಾಟಿ ಬೀಜಗಳ, ತಳಿಗಳ ಸಂರಕ್ಷಣೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ತಮ್ಮ ಲೇಖನಗಳ ಮೂಲಕ ಹಲವಾರು ಜನಗಳ ಮನದಾಳಕ್ಕೆ ಸಾವಯವ ಕೃಷಿಯನ್ನು ತಲುಪಿಸುತ್ತಿರುವ ಪ್ರಾಮಾಣಿಕ ತರುಣ.

3. ಹೊಂಬಾಳಮ್ಮ: ಕರ್ನಾಟಕ ತಮಿಳುನಾಡಿನ ಅಂಚಿನ ಊರಾದ ತಳಿಯ ಈಕೆ ಜೀವನದ ಸಂಘರ್ಷದಲ್ಲಿ ತುಂಬು ಸಂಸಾರ ತೂಗಿಸುತ್ತಾ ಅದರ ನಡುವೇ ಹಲವಾರು ನಾಟಿ ತಳಿಗಳನ್ನು ಸಂರಕ್ಷಿಸಿ, ಬೀಜ ಬ್ಯಾಂಕೊಂದನ್ನು ಆರಂಭಿಸಿ ಮಹಿಳೆಯರ ಹಿತರಕ್ಷಣೆಯ ಪಂಚಾಯತಿ ಸದಸ್ಯೆ. ಈಕೆಯ ಗ್ರಾಮೀಣ ಪ್ರತಿಭೆಗೆ ಈಗ 'ಸೃಷ್ಟಿ' ಸನ್ಮಾನದ ಗರಿ.

4. ಅನಸೂಯ ಎಸ್. ಶರ್ಮ: ಮನೆಯ ತಾರಸಿಯಲ್ಲೇ ತೋಟವೊಂದನ್ನು ನಿರ್ಮಿಸಿ, ಹಲವಾರು ಔಷಧೀಯ ಸಸ್ಯಗಳ ಜೊತೆಗೆ ಜೀವ ವೈವಿಧ್ಯತೆಗೆ ಒತ್ತುಕೊಟ್ಟು ಪರಿಸರ ಮಾಲಿನ್ಯ ತಪ್ಪಿಸಿ, ಸಾವಯವ ಸಂಸ್ಕೃತಿಯನ್ನು ಜನಗಳಿಗೆ ಪರಿಚಯಿಸಿ ಈ ಮೂಲಕ ಬೆಂಗಳೂರು ನಗರದ ಕೆಲವಾದರೂ ಖಾಲಿ ಮಹಡಿಗಳು ಹಸಿರಿಂದ ತುಂಬುವಂತೆ ಮಾಡಿದ ಒಂದು ದಶಕದ ಪ್ರಾಮಾಣಿಕ ತುಡಿತಕ್ಕೀಗ 'ಸೃಷ್ಟಿ' ಸನ್ಮಾನದ ಸಮರ್ಥನೆ.

5. ವಿಜಯ ಅಂಗಡಿ: ಹಾಸನದ ಆಕಾಶವಾಣಿಯಲ್ಲಿ ಕೃಷಿ ಪ್ರಚಾರ ಅಧಿಕಾರಿ. ಕನ್ನಡದಲ್ಲಿ ಕೃಷಿಯ ಬಗ್ಗೆ ಇವರು ಬರೆದಿರುವ ಲೇಖನಕ್ಕೆ ಇತಿಮಿತಿಯೇ ಇಲ್ಲ. ಜಿಲ್ಲೆಯಾದ್ಯಂತ ಸಾವಯವ ಕೃಷಿಕರ ಕೂಟವೊಂದನ್ನು ಕಟ್ಟಿದ ಉತ್ಸಾಹಿ ತರುಣ.

ವ್ಯವಸ್ಥಿತಗೊಳ್ಳುತ್ತಿರುವ ಹಿತ್ತಲಗಿಡ

ಹತ್ತಿ ಬೆಳೆಯಲ್ಲಿ ಅತ್ಯಂತ ಉಪದ್ರವಕಾರಿಯಾದ ಬಿಳಿನೊಣಗಳನ್ನು ಹಸುವಿನ ಗಂಜಲದಿಂದ ಹತೋಟಿ ಮಾಡಬಹುದು ಎಂಬ ವಿಚಾರ 'ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಪರಿಷತ್ತಿ'ನ ಪತ್ರಿಕೆ 'Natural Product Radiance'ನಲ್ಲಿ ವರದಿಯಾಗಿದೆ. ಸೆನೆಗಲ್‌ನ ಹತ್ತಿ ಬೆಳೆಗಾರರೊಬ್ಬರು ರಾಸಾಯನಿಕಗಳಿಂದ ನಿಯಂತ್ರಿಸಲು ಸಾಧ್ಯವಾಗದೆ ಬೇಸತ್ತು ಹಸುವಿನ ಗಂಜಲ ಬಳಸಿ ಅತ್ಯುತ್ತಮ ಫಲಿತಾಂಶ ಪಡೆದಿದ್ದನ್ನು ವರದಿ ತಿಳಿಸುತ್ತದೆ. ಹಾಲು ಕರೆಯುವ ಮೊದಲು ಗಂಜಲವನ್ನು ಶೇಖರಿಸಿ ಸ್ವಲ್ಪ ದಿನಗಳವರೆಗೆ ಕೊಳೆಯಲು ಬಿಟ್ಟು ಸಾಕಷ್ಟು ನೀರಿನೊಂದಿಗೆ ಬೆರೆಸಿ ಸಿಂಪಡಿಸಿದರೆ ಬಿಳಿ ನೊಣಗಳ ಹತೋಟಿ ಸಾಧ್ಯವಲ್ಲದೆ ಇದರ ಹುಳಿ ಗುಣ (acidity) ಹೊಸದಾಗಿ ಮೊಳಕೆ ಒಡೆದ ಕಳೆಗಿಡಗಳನ್ನು ಕೊಲ್ಲುತ್ತದೆ ಎಂಬುದು ಇದರ ಸಾರಾಂಶ.

ಮೂಲ: *Deccan Herald, May 1, 2003*

ಹನಿ ಬೀ ಜಾಲ ಮತ್ತಷ್ಟು ವ್ಯವಸ್ಥಿತಗೊಳ್ಳುವ ದಾರಿಗಳು

ತಳಮಟ್ಟದ ಕ್ರಿಯಾಶೀಲ ಸಂಶೋಧಕರನ್ನು ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿರುವ ಹನಿ ಬೀ ಪತ್ರಿಕೆ, ತನ್ನ ಪ್ರಾದೇಶಿಕ ಸೋದರ ಪತ್ರಿಕೆಗಳ ಜೊತೆ ಸೇರಿ ಸಭೆಯೊಂದನ್ನು ಕಳೆದ ಏಪ್ರಿಲ್ 21 ಮತ್ತು 22 ರಂದು ಅಹಮದಾಬಾದ್‌ನ ಐ.ಐ.ಎಂ.ನಲ್ಲಿ ಏರ್ಪಡಿಸಿತ್ತು.

ಹನಿಬೀಯ ಸೃಷ್ಟಿಕರ್ತ ಪ್ರೊ. ಅನಿಲ್ ಗುಪ್ತರ ಪ್ರಾಸ್ತಾವಿಕ ಭಾಷಣದೊಂದಿಗೆ ಎರಡು ದಿನಗಳ ಸಭೆಗೆ ಚಾಲನೆ ಸಿಕ್ಕಿತು. ಮೊದಲ ದಿನದ ಬೆಳಗಿನ ಗೋಷ್ಠಿಯಲ್ಲಿ ಹನಿಬೀ ಸೋದರ ಪತ್ರಿಕೆಗಳ ಸಂಪಾದಕರು ರಾಜ್ಯವಾರು ಮಟ್ಟದ ಕಾರ್ಯಕ್ರಮಗಳು, ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಕಾರ್ಯಚಟುವಟಿಕೆಗಳ ಬಗ್ಗೆ ವಿವರ ನೀಡಿದರು. ಮಧ್ಯಾಹ್ನದ ಗೋಷ್ಠಿಯಲ್ಲಿ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ವಿಡಿಯೋ ಪ್ರದರ್ಶನ ಮತ್ತು ತಳಮಟ್ಟದ ಸಂಶೋಧಕರ ಜಾಲದ ಪರಿಚಯ ಮಾಡಿಕೊಡಲಾಯಿತು.

ಸಂಜೆಯ ಗೋಷ್ಠಿಯಲ್ಲಿ ಹನಿಬೀ ಚಟುವಟಿಕೆಗಳನ್ನು ಬಲಗೊಳಿಸಲು ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಗುಂಪು ಚರ್ಚೆ ಏರ್ಪಾಡಾಗಿತ್ತು. ಕರ್ನಾಟಕವನ್ನು ಪ್ರತಿನಿಧಿಸಿದ್ದ ಹಿತ್ತಲಗಿಡದ ಸಂಪಾದಕ ಪ್ರಕಾಶ್ ಕಮ್ಮರಡಿ, ಧಾರವಾಡ ಕೃಷಿ ವಿಶ್ವ ವಿದ್ಯಾನಿಲಯದ ಡಾ. ಬೂದಿಹಾಳ್, ಗ್ರೀನ್ ಪ್ರತಿಷ್ಠಾನದ ಜಿ. ಕೃಷ್ಣಪ್ರಸಾದ್, ಸಾವಯವ ಕೃಷಿಕರಾದ ಅನಸೂಯ ಶರ್ಮ, ಅಯ್ಯಪ್ಪ ಮಸಗಿ ಮತ್ತು ಹೊಂಬಾಳಮ್ಮ ಅವರುಗಳು ಹಿತ್ತಲ ಗಿಡ ಪತ್ರಿಕೆ ಮತ್ತು 'ಹನಿ ಬೀ' ಚಟುವಟಿಕೆಗಳನ್ನು ಬಲಗೊಳಿಸುವ ಬಗ್ಗೆ ವಿವರವಾಗಿ ಚರ್ಚಿಸಿದರು.

ಎರಡನೆಯ ದಿನದ ಬೆಳಗಿನ ಗೋಷ್ಠಿಯಲ್ಲಿ ಕರ್ನಾಟಕದ ಪ್ರತಿನಿಧಿಗಳು ಚರ್ಚಿಸಿ ಸಿದ್ಧಗೊಳಿಸಿದ ಅಂಶಗಳನ್ನು ಕೃಷ್ಣಪ್ರಸಾದ್ ಮಂಡನೆ ಮಾಡಿದರು. ಆ ಅಂಶಗಳು ಇಂತಿವೆ:

(1) ರಾಷ್ಟ್ರೀಯ ಅನುಶೋಧನಾ ಸ್ಪರ್ಧೆಗೆ ತಳಮಟ್ಟದ ಜನರ ಸಂಶೋಧನೆಗಳನ್ನು ಗುರುತಿಸಿ ಸಂಗ್ರಹಿಸಲು ಮತ್ತು ಹಿತ್ತಲ ಗಿಡದ ಚಟುವಟಿಕೆಗಳನ್ನು ಬಲ ಪಡಿಸಲು, ಈ ಕ್ಷೇತ್ರದಲ್ಲಿ ಈಗಾಗಲೇ ತಮ್ಮನ್ನು ತೊಡಗಿಸಿಕೊಂಡಿರುವ ಸರ್ಕಾರೇತರ ಸಂಸ್ಥೆ, ವಿಜ್ಞಾನಿ, ಕೃಷಿಕರು, ಸಂಶೋಧನಾ ಕೇಂದ್ರಗಳು, ಸರ್ಕಾರಿ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯೊಂದನ್ನು ರಚಿಸುವುದು.

(2) 'ಸಂಶೋಧಕರ ಮೇಳ' ವೊಂದನ್ನು ಏರ್ಪಾಡು ಮಾಡಿ, ಆ ಸಂದರ್ಭದಲ್ಲಿ ಸಮಾನ ಮನಸ್ಕ ಸಂಸ್ಥೆ ಮತ್ತು ವ್ಯಕ್ತಿಗಳನ್ನು ಆಹ್ವಾನಿಸಿ ಚರ್ಚಿಸುವುದು.

(3) ದೇಶೀಯ ಜ್ಞಾನ ಸಂಪನ್ನರು ಮತ್ತು ತಳಮಟ್ಟದ ಸಂಶೋಧಕರ ನಡುವೆ ಬಾಂಧವ್ಯ ಬೆಸೆಯಲು ಅನುಭವ ಹಂಚಿಕೆ ಕಾರ್ಯಾಗಾರ ನಡೆಸಿ, ಕರ್ನಾಟಕ ಸಂಶೋಧಕರ ಜಾಲ ಬಲಪಡಿಸುವುದು. ಸಂಶೋಧಕರನ್ನು ಪ್ರೋತ್ಸಾಹಿಸಲು 'ರಾಜ್ಯಮಟ್ಟದ ಹಣಕಾಸು ನಿಧಿ' ಯೊಂದನ್ನು ಸ್ಥಾಪಿಸಲು ಸರ್ಕಾರದ ನೆರವು ಕೇಳುವುದು.

(4) ತಳಮಟ್ಟದ ಸಂಶೋಧನೆಗಳ ಮೌಲ್ಯವರ್ಧನೆ ಮಾಡಲು ರೈತ ವಿಜ್ಞಾನಿಗಳ ಭೇಟಿ ಕಾರ್ಯಕ್ರಮ, ಕರ್ನಾಟಕದ ವಿವಿಧ ಜಿಲ್ಲೆಗಳ ಸಾವಯವ ಕೃಷಿಕರ ಬಳಗಗಳಿಗೆ ರೈತ ಸಂಶೋಧನೆಗಳ ಮಾಹಿತಿ ನೀಡಿ ಪ್ರಾಯೋಗಿಕವಾಗಿ ಪರೀಕ್ಷೆ ಮಾಡಿ ಫಲಿತಾಂಶ ತಿಳಿಸಲು ಕೇಳುವುದು ಮತ್ತು ಸಮಾನ ಮನಸ್ಕ ವಿಜ್ಞಾನಿ ಮತ್ತು ಸಂಶೋಧನಾ ಕೇಂದ್ರಗಳ ನೆರವಿನೊಂದಿಗೆ ಸಂಶೋಧನೆಗಳಿಗೆ ವೈಜ್ಞಾನಿಕ ತಳಹದಿ ವಿಸ್ತೃತಗೊಳಿಸುವುದು.

5) ತಳಮಟ್ಟದ ಸಂಶೋಧನೆ ಮತ್ತು ಸಂಶೋಧಕರನ್ನು ಪತ್ತೆ ಹಚ್ಚಲು ಶೋಧಯಾತ್ರೆ, ಶಾಲಾಮಟ್ಟದ ಜೀವ ವೈವಿಧ್ಯ ಸಂರಕ್ಷಣಾ ಸ್ಪರ್ಧೆ, ಪತ್ರಿಕೆಗಳಲ್ಲಿ ದೇಶೀಯ ಜ್ಞಾನದ ದಾಖಲಾತಿಯ ಅಂಕಣ, ಬರಹಗಾರರಿಗೆ ಕಾರ್ಯಾಗಾರ, ಜಿಲ್ಲಾ ಮಟ್ಟದ ಸಂಶೋಧಕರ ಮಿಲನದಂತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

6) NIF ಸ್ಪರ್ಧೆಗೆ ಮತ್ತು ಹನಿಬೀ ಜಾಲದ ಕಾರ್ಯಚಟುವಟಿಕೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತಮಗೊಳಿಸುವ ಪ್ರಯತ್ನವಾಗಿ, ಮಹಿಳಾ ಸ್ವಸಹಾಯ ಸಂಘ, ಮಹಿಳಾ ಕ್ಲಬ್ ಮತ್ತು ಮಹಿಳಾ ಸಂಘಗಳ ಮಹಾಮಂಡಳಿಗಳ ನೆರವು ಪಡೆಯುವುದು. ತಳಮಟ್ಟದ ಮಹಿಳಾ ಸಂಶೋಧಕಿಯರನ್ನು ಪ್ರೋತ್ಸಾಹಿಸುವುದು.

ಮಧ್ಯಾಹ್ನದ ಗೋಷ್ಠಿಯಲ್ಲಿ ತಳಮಟ್ಟದ ಸಂಶೋಧಕರ ಸಂಶೋಧನೆಗಳ ಹಕ್ಕನ್ನು ಕಾಯ್ದಿರಿಸುವ ಪೇಟೆಂಟ್ ಮಾಡಿಸುವ, ವಾಣಿಜ್ಯೀಕರಣಗೊಳಿಸುವ ಬಗ್ಗೆ ಚರ್ಚಿಸಲಾಯಿತು. 'ಹನಿ ಬೀ' ಯ ಅಂಗ ಸಂಸ್ಥೆ 'ಸೃಷ್ಟಿ' ಯ ಕಾರ್ಯಚಟುವಟಿಕೆಗಳ ಪರಿಚಯ ಮಾಡಿಕೊಡಲಾಯಿತು. ಸಭೆಯ ಕೊನೆಗೆ ಸೃಷ್ಟಿ ಸನ್ಮಾನ ವಿಜೇತರನ್ನು ಸನ್ಮಾನಿಸಲಾಯಿತು.

ಲೇಖನ: ಕೃಷ್ಣಪ್ರಸಾದ್ .ಜಿ

ಮುಂದಿನ ಶೋಧಯಾತ್ರೆ ಕರ್ನಾಟಕದಲ್ಲಿ

ದೇಶದ ಮೂಲೆ ಮೂಲೆಯಲ್ಲಿ ಅಡಗಿರಬಹುದಾದ ಪಾರಂಪರಿಕ ಜ್ಞಾನ ಮತ್ತು ಸ್ಥಳೀಯವಾಗಿ ಅಲ್ಲಿನ ಅಗತ್ಯಕ್ಕೆ ತಕ್ಕಂತೆ ರೂಪಿತಗೊಂಡ ಅನುಶೋಧನೆಗಳನ್ನು ದಾಖಲಿಸಲು ಪ್ರಸ್ತುತ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮುಖ್ಯಸ್ಥರಾದ ಡಾ. ಅನಿಲ್ ಕೆ. ಗುಪ್ತಾರವರು ಕಂಡುಕೊಂಡ ವಿನೂತನ ಮಾರ್ಗ ಶೋಧಯಾತ್ರೆ. ಸ್ಥಳೀಯ ಪಾರಂಪರಿಕ ಜ್ಞಾನದ ಸಂರಕ್ಷಕರು ಮತ್ತು ಅನುಶೋಧಕರನ್ನು ಗುರುತಿಸಿ ಅವರೊಂದಿಗೆ ಚರ್ಚಿಸಿ, ಅವುಗಳನ್ನು ದಾಖಲಿಸಿಕೊಳ್ಳುತ್ತಾ ಸುಮಾರು ನೂರು ಕಿಲೋ ಮೀಟರ್‌ಗಳಿಗೂ ಹೆಚ್ಚು ದೂರ ಪಾದಯಾತ್ರೆಯಲ್ಲಿ ಕ್ರಮಿಸುವುದು ಈ ಶೋಧಯಾತ್ರೆಯ ಉದ್ದೇಶವಾಗಿದೆ. ಇದುವರೆಗೂ ಇಂತಹ ಹನ್ನೊಂದು ಯಾತ್ರೆಗಳು ದೇಶದ ವಿವಿಧ ಮೂಲೆಗಳಲ್ಲಿ ನಡೆದಿದ್ದು, ಹನ್ನೆರಡನೆಯ ಶೋಧಯಾತ್ರೆಯನ್ನು ಕರ್ನಾಟಕದ ಮಲೆನಾಡಿನ ನಿತ್ಯ ಹರಿದ್ವರ್ಣ ಕಾಡುಗಳ ಮಧ್ಯೆ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಈ ಉದ್ದೇಶಿತ ಯಾತ್ರೆಯು ಡಿಸೆಂಬರ್, 2003ರಲ್ಲಿ ಸುಮಾರು ಹತ್ತು ದಿನಗಳ ಕಾಲ ನಡೆಯಲಿದೆ. ಇದರಲ್ಲಿ ಭಾಗವಹಿಸಲಿಚ್ಛಿಸುವ ಆಸಕ್ತರು 'ಹಿತ್ತಲಗಿಡ' ವನ್ನು ಸಂಪರ್ಕಿಸತಕ್ಕದ್ದು.

ಔಷಧೀಯ ಸಸ್ಯಗಳು ಮತ್ತು ಆರೋಗ್ಯ

ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯು ಔಷಧೀಯ ಸಸ್ಯಗಳು ಮತ್ತು ಆರೋಗ್ಯ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಏಪ್ರಿಲ್ 6, 2003 ಭಾನುವಾರದಂದು ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಿತ್ತು. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ತಜ್ಞರು ಮತ್ತು ಆಯುರ್ವೇದ ವೈದ್ಯರುಗಳು ಈ ತರಬೇತಿ ನೀಡಿದರು. ಇದೇ ಸಂದರ್ಭದಲ್ಲಿ ಔಷಧೀಯ ಸಸ್ಯಗಳು, ಸಸ್ಯ ಆಧಾರಿತ ಔಷಧಿಗಳು ಮತ್ತು ಸೌಂದರ್ಯ ವರ್ಧಕಗಳ ಪ್ರದರ್ಶನ ಹಾಗೂ ಮಾರಾಟವನ್ನು ಆಯೋಜಿಸಲಾಗಿತ್ತು.

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ನಾಲ್ಕನೇ ಸುತ್ತಿನ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪು–ರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 5,000ದ ಐನೂರು ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದವರಿಗೂ ಅಷ್ಟೇ ಆಕರ್ಷಕ ಬಹುಮಾನಗಳನ್ನು ನೀಡಲಾಗುವುದು. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿ ತರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೊಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಈ ಸ್ಪರ್ಧೆಗೆ 2004ರ ಆಗಸ್ಟ್‌ವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹಾ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು "ಪೂರ್ವ ಸೂಚಿತ ಸಮ್ಮತಿ" (Prior Informed Concent) ಪಡೆದ ನಂತರವೇ ಮುಂದುವರೆಯಲಾಗುವುದು.

ಪ್ರವೇಶ ಪತ್ರ ಕಳುಹಿಸಬೇಕಾದ ವಿಳಾಸ:

ಡಾ: ಟಿ.ಎನ್. ಪ್ರಕಾಶ್ ಕಮ್ಮರಡಿ, ಸಹ ಪ್ರಾಧ್ಯಾಪಕ ಮತ್ತು ಸಂಪಾದಕ 'ಹಿತ್ತಲಗಿಡ', ಕೃಷಿ ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ,
ಜಿ.ಕೆ.ವಿ.ಕೆ., ಬೆಂಗಳೂರು – 560 065 ದೂರವಾಣಿ: 362 0025, email: prakashtnk@yahoo.com

(ಎಂತಹ ಶೋಧನೆಗಳನ್ನು ಕಳುಹಿಸಬಹುದು ಎನ್ನುವ ಉದಾಹರಣಾ ಮಾಹಿತಿಗಾಗಿ ಹಳೆಯ 'ಹಿತ್ತಲಗಿಡ' ಪುಸ್ತಕಗಳನ್ನು ನೋಡಬಹುದು)

ರಾಷ್ಟ್ರೀಯ ಸ್ಪರ್ಧೆಯ ಸಂಚಾಲಕರು:

National Co-ordinator, National Innovation Foundation, Satellite complex, Bangalow No.1,
Premchand Nagar Road, Ahmedabad - 380 015, Gujarat, e-main: campaign@nifindia. org

ಪತ್ರಿಕೆ ನೋಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ಗೆ, ...
....
....
....

ವಿಳಾಸ
ಡಾ.ಟಿ. ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

Ph : 080-3620025 (O), 8560267 (R)
E-mail : hittalu@bgl.vsnl.net.in and prakashtnk@yahoo.com

Printed by Sri S. Sridhar, Published by Smt. K. Meenakshi (Owner). Printed at "Navbharath Enterprises", No. 10, Sirur Park 'B' Street, Seshadripuram, Bangalore - 560 020, ✆ : 336 4142, 336 4682.
Published at No. 399, 14-B Cross, New Town Yelahanka, Bangalore - 560 064. Edited by Dr. T.N. Prakash Kammaradi